# ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ 2024–2025

## ಪ್ರಶ್ನೋತ್ತರಾವಳೀ

## Level -2 (2,3 ನೇಯ ಬಾರಿ ಲಿಕುಚ ಪರೀಕ್ಷೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ)

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥

Rev – Oct 18 2024

## ಮಧ್ವವಿಜಯ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 1. | ಶ್ರೀವೇದವ್ಯಾಸರಿಂದ ಪಾಲಿತವಾದ ಗೋಕುಲ ಯಾವುದು? | ವೇದಗಳು | ೨ | ೧ |
| 2. | ರಾಜಕುಮಾರರೊಡನೆ ಆಟವಾಡುತ್ತಿದ್ದಾಗ ಭೀಮನು ಏನನ್ನು ಸ್ಮರಿಸಿಕೊಂಡ? | ಬಾಲ್ಯದಲ್ಲಿ ಕಾಡಿನ ಸಿಂಹಗಳೊಡನೆ ಆಟವಾಡುತ್ತಾ ಅವುಗಳನ್ನುಕೊಂದದ್ದನ್ನು | ೩೦ | |
| 3. | ಮಾಯಾವಾದಿಯಾಗಿ ಭೂಮಿಯಲ್ಲಿ ಹುಟ್ಟಿದ ದೈತ್ಯ ಯಾರು? | ಮಣಿಮಂತ | ೪೭ | |
| 4. | ಶ್ರೀವೇದವ್ಯಾಸರು ಮಾಯಾವಾದಿಯನ್ನು ತತ್ ಕ್ಷಣದಲ್ಲಿಯೇ ಯಾಕೆ ಸಂಹರಿಸಲಿಲ್ಲ? | ಶೀವೇದವ್ಯಾಸರು ಕ್ಷಮಾಸಮುದ್ರರಾದುದರಿಂದ | ೫೩ | |
| 5. | ಶಿವರೂಪ್ಯ (ಶಿವಳ್ಳಿ) ಗ್ರಾಮದ ಎಲ್ಲೆ ಯಾವುದು? | ವೇದಚಲ ಮತ್ತು ರಜತಪೀಠಪುರೇಶ್ವರ | ೧೦ | |
| 6. | 'ಪಾಜಕ' ಎಂಬ ಪದದಲ್ಲಿ ಶ್ರೀಹರಿಯ ಪರಶುರಾಮಾವತಾರವನ್ನು ಹೇಳುವ ಶಬ್ದ ಯಾವುದು? | ಪಾಜ (ವಿಶ್ವವನ್ನು ರಕ್ಷಿಸುವ, ಜನನ ರಹಿತನಾದ ಶ್ರೀಹರಿ) | ೧೧ | |
| 7. | ಮಧ್ಯಗೇಹಭಟ್ಟರು ವಿವಾಹವಾದ ಕನ್ಯೆಯನ್ನು ನಾರಾಯಣ ಪಂಡಿತಾಚಾರ್ಯರು ಯಾವುದಕ್ಕೆ ಹೋಲಿಸಿದರು? | ವೇದವಿದ್ಯೆ | ೧೨ | |
| 8. | ಪುತ್ರ ಎಂದರು ಯಾರು? | ಮೋಕ್ಷೋಪಯೋಗಿಯಾದ ಜ್ಞಾನವನ್ನು ಕೊಟ್ಟು ನರಕದಿಂದ ರಕ್ಷಿಸುವವನು | ೧೭ | |
| 9. | ಮಧ್ಯಗೇಹಭಟ್ಟರು ಮಗನನ್ನು ಹುಡುಕಿದ ರೀತಿಗೆ ಯಾವುದರ ಉಪಮೆಯನ್ನು ಕೊಡಲಾಗಿದೆ? | ಜೇನುನೊಣ (ಮಹಾಮಧುಪ) | ೯ | |
| 10. | ಬಾಲಕ ವಾಸುದೇವನು ಉಪನ್ಯಾಸಕನ್ನು ಏನೆಂದು ಆಕ್ಷೇಪಿಸಿದನು? | ಮಹಾತ್ಮರ ಮತಕ್ಕೆ ವಿರುದ್ಧವಾಗಿ ಹೇಳುತ್ತಿರುವಿ ಎಂದು | ೨೩ | |
| 11. | ವಾಸುದೇವನಿಗೆ ಸನ್ಯಾಸದೀಕ್ಷೆ ಕೊಟ್ಟ ಗುರುಗಳು ಯಾರು ಮತ್ತು ಯಾವ ಮತದ ಅನುಯಾಯಿಗಳು? | ಅಚ್ಯುತಪ್ರೇಕ್ಷಾಚಾರ್ಯರು, ಅದ್ವೈತಮತಾವಲಂಬಿಗಳು | ೮ | |
| 12. | ಸಜ್ಜನರು ಯಾವುದನ್ನು ಅಸದೃಶವಾದ ಸೌಂದರ್ಯ ಎಂದು ಹೇಳುತ್ತಾರೆ? | ಸ್ವಾಭಾವಿಕವಾದ ಶೋಭೆ | ೩೪ | |
| 13. | ಅನಂತಾಸನದೇವರು ಅಚ್ಯುತಪ್ರೇಕ್ಷಾಚಾರ್ಯರ ಬಹುಕಾಲದ ನಿರೀಕ್ಷೆಯನ್ನು ಹೇಗೆ ಪೂರೈಸಿದರು? | ಒಬ್ಬ ಮನುಷ್ಯನಲ್ಲಿ ಪ್ರವೇಶಿಸಿದ ಅನಂತಾಸನದೇವರು, ಪೂರ್ಣಪ್ರಜ್ಞರ ಕೈಯನ್ನು ಅಚ್ಯುತಪ್ರೇಕ್ಷಾಚಾರ್ಯರ ಕೈಯಲ್ಲಿ ಒಪ್ಪಿಸುವ ಮೂಲಕ ಪೂರೈಸಿದರು | ೩೭ | |
| 14. | ಯಾವ ಕಾರಣದಿಂದಾಗಿ ಪೂರ್ಣಪ್ರಜ್ಞರು ಮೊದಲಿಗೆ ಮಾಯಾವಾದದ ಪ್ರವಚವನ್ನು ಮಾಡಿದರು? | ಅಧ್ಯಯನ ಮತ್ತು ಅಧ್ಯಾಪನಗಳು ಯತಿಗೆ ಅವಶ್ಯವಾದ ಕರ್ತವ್ಯವಾದ್ದರಿಂದ | ೪೭ | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 15. | ಬುದ್ಧಿಸಾಗರನನ್ನು ಸೋಲಿಸಿದ ಆನಂದತೀರ್ಥರನ್ನು ಯಾರಿಗೆ ಹೋಲಿಸಲಾಗಿದೆ? | ಎತ್ತರದ ಅಲೆಗಳಿಂದ ಆರ್ಭಟಿಸುತ್ತಿದ್ದ ಸಮುದ್ರವನ್ನು ಆಪೋಶನ ಮಾಡಿದ ಅಗಸ್ತ್ಯರಿಗೆ ಹೋಲಿಸಲಾಗಿದೆ | ೧೪ | ೫ |
| 16. | ಆರಂಭದಲ್ಲಿ ಆನಂದತೀರ್ಥರು ಯಾವ ಭಾಷ್ಯವನ್ನು ಪಾಠಮಾಡುತ್ತಿದ್ದರು? | ಶಾಂಕರಭಾಷ್ಯ | ೧೭ | |
| 17. | ಆನಂದತೀರ್ಥರು ಆರಂಭದಲ್ಲಿ ಯಾವದಿಕ್ಕಿಗೆ ದಿಗ್ವಿಜಯ ಹೊರಟರು? | ದಕ್ಷಿಣದಿಕ್ಕಿಗೆ | ೩೦ | |
| 18. | ದಕ್ಷಿಣದ ದಿಗ್ವಿಜಯವನ್ನುಪೂರೈಸಿ ಆನಂದತೀರ್ಥರು ಯಾವ ದಿಕ್ಕಿಗೆ ಹೋದರು? | ಉತ್ತರದಿಕ್ಕಿಗೆ | ೪೮ | |
| 19. | ವಿಷ್ಣುಸಹಸ್ರನಾಮದ ನೂರು ಅರ್ಥವನ್ನು ವಿವರಿಸಿ ಎಂದು ಆನಂದತೀರ್ಥರಿಗೆ ಸವಾಲು ಹಾಕಿದಾಗ ಆನಂದತೀರ್ಥರು ಏನು ಪ್ರತಿಸವಾಲು ಹಾಕಿದರು? | ತಾನು ಹೇಳಿದ್ದನು ಕೇಳಿದವರು ಪುನಃ ಅನುವಾದಮಾಡಬೇಕೆಂದರು | ೯ | |
| 20. | ಕೇರಳದ ಪಂಡಿತರು ಯಾವ ಸೂಕ್ತದ ಬಗ್ಗೆ ಕೇಳಿದರು? | ಅನ್ನದಾನದ ಪ್ರಶಂಸೆ ಮತ್ತು ಅನ್ನದಾನಮಾಡದಿರುವ ಬಗ್ಗೆ ನಿಂದನೆ ಮಾಡುವ ಸೂಕ್ತ. | ೧೩ | |
| 21. | ಅಪಾಲಾ ಶಬ್ದಕ್ಕೆ ಬೇರೆಯವರು ಹೇಳಿದ ಅರ್ಥ ಏನು? | ಕುಷ್ಠರೋಗಿ | ೧೭ | |
| 22. | ಬದರಿಯಲ್ಲಿ ಆನಂದತೀರ್ಥರು ವಾಸಮಾಡುತ್ತಿದ್ದ ಮಠದ ಹೆಸರೇನು? | ಅನಂತಮಠ | ೪೪ | |
| 23. | ಬದರೀವೃಕ್ಷವನ್ನು ಯಾರಿಗೆ ಹೋಲಿಸಲಾಗಿದೆ? | ಶೇಷದೇವರು ಮತ್ತು ಗರುಡದೇವರು | ೧೧,೧೨ | ೭ |
| 24. | ಸಮುದ್ರಮಥನದಲ್ಲಿ ಸಮುದ್ರದಿಂದ ಲಕ್ಷ್ಮಿಯು ಪ್ರಾದುರ್ಭವಿಸಿದಂತೆ ವೇದವ್ಯಾಸರ ಮನಸ್ಸಿನಿಂದ ಪ್ರಾದುರ್ಭವಿಸಿದ್ದು ಯಾವುದು? | ತ್ರಯೀ ಎನಿಸಿದ ವೇದಗಳು | ೧೬ | |
| 25. | ವೇದವ್ಯಾಸರು ಜನರ ದೃಷ್ಟಿಯಿಂದ ದೂರ ಹೋಗಲು ಕಾರಣವೇನು? | ಕಲಿಕಾಲಪ್ರವೃತ್ತಿಗಾಗಿ | ೨೨ | |
| 26. | ವೇದವ್ಯಾಸರ ಪಾದದಲ್ಲಿ ಯಾವುದರ ಚಿಹ್ನೆಯಿದೆ? | ಧ್ವಜ, ವಜ್ರ, ಅಂಕುಶ ಮತ್ತು ಪದ್ಮ | ೨೯ | |
| 27. | ವೇದವ್ಯಾಸರ ಯಜ್ಞೋಪವೀತವನ್ನು ಯಾವುದಕ್ಕೆ ಹೋಲಿಸಲಾಗಿದೆ? | ಮೂರುವೇದಗಳು | ೩೩ | |
| 28. | ವೇದವ್ಯಾಸರು ತಮ್ಮ ಕೈಯ ತರ್ಕಮುದ್ರೆಯಿಂದ ಏನು ಮಾಡುತ್ತಾರೆ? | ತನ್ನ ಭಕ್ತರ ಅಜ್ಞಾನವನ್ನುಕಳೆಯುತ್ತಾರೆ | ೩೯ | |
| 29. | ವೇದವ್ಯಾಸರ ಹಣೆಯ ತಿಲಕ ಹೇಗೆ ವರ್ಣಿತವಾಗಿದೆ? | ಇಂದ್ರನೀಲಮಣಿಯ ಪರ್ವತಶಿಖರದಲ್ಲಿ ಇರುವ ಪದ್ಮರಾಗಮಣಿಗಳ ಸಾಲಿನಂತೆ ವರ್ಣಿತವಾಗಿದೆ | ೪೪ | |
| 30. | ವೇದವ್ಯಾಸರು ಮತ್ತು ಆನಂದತೀರ್ಥರ ಆಲಿಂಗನವು ಹೇಗೆ ಶೋಭಿಸುತ್ತಿತ್ತು | ಯಮುನಾನದಿಯೊಡನೆ ಸೇರಿದ ಬಂಗಾರದ ನದಿಯಂತೆ | ೫೩ | |
| 31. | ಆನಂದತೀರ್ಥರು ವೇದವ್ಯಾಸರಲ್ಲಿ ಯಾವುದರ ಉಪದೇಶವನ್ನು ಪಡೆದರು? | ಮೂಲರಾಮಾಯಣ, ಮಹಾಭಾರತ, ಬ್ರಹ್ಮಸೂತ್ರ, ಪುರಾಣ ಹಾಗೂ ವೇದಗಳ | ೪ | ೮ |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| | | ಪರಮತತ್ವರ್ಯವನ್ನು ಕೇಳಿ ತಿಳಿದುಕೊಂಡರು. | | |
| 32. | ಪರಶುರಾಮಾವತಾರ ಯಾವ ವಂಶದಲ್ಲಿ ಆಯಿತು? | ಭೃಗುವಂಶದಲ್ಲಿ | ೧೮ | |
| 33. | ಕಲ್ಕಿರೂಪಿ ಭಗವಂತನ ಯಾರ ಮಗನಾಗಿ ಪ್ರಾದುರ್ಭವಿಸುತ್ತಾನೆ? | ವಿಷ್ಣು ಯಶಸ್ಸು ಎಂಬ ಬ್ರಾಹ್ಮಣನ ಮಗನಾಗಿ | ೩೫ | |
| 34. | ಸನಕಾದಿಗಳಿಗೆ ಭಗವಂತನು ಯಾವ ರೂಪದಿಂದ ತತ್ತ್ವವನ್ನು ಉಪದೇಶಿಸಿದನು? | ಹಂಸರೂಪದಿಂದ | ೩೯ | |
| 35. | ಯಮಧರ್ಮನಲ್ಲಿ ಭಗವಂತನು ಮಾಡಿದ ಅವತಾರಗಳು ಯಾವುವು? | ಹರಿ, ಕೃಷ್ಣ, ನರ ಮತ್ತು ನಾರಾಯಣ | ೪೦ | |
| 36. | ನಾರಾಯಣಮುನಿಗಳು ಆನಂದತೀರ್ಥರಿಗೆ ಏನನ್ನು ಮಾಡಲು ಆದೇಶಿಸಿದರು ? | ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಲು ಹೇಳಿದರು | ೪೫ | |
| 37. | ವೇದವ್ಯಾಸರು, ನಾರಾಯಣಮುನಿಗಳು ಮತ್ತು ಆನಂದತೀರ್ಥರು ಜೊತೆಗೆ ಇದ್ದಾಗ ಹೇಗೆ ಶೋಭಿಸಿದರು? | ಮೂರುವೇದಗಳಂತೆ | ೫೪ | |
| 38. | ಆನಂದತೀರ್ಥರು ಬದರಿಯಿಂದ ಹಿಂತಿರುಗಿದಾಗ ವಿವಿಧಭಿಕ್ಷಾನ್ನವನ್ನು ತಂದ ಬ್ರಾಹ್ಮಣರು ಯಾರು? | ಅಗ್ನಿಶರ್ಮ ಮೊದಲಾದವರು | ೭ | ೬ |
| 39. | ಆನಂದತೀರ್ಥರಿಗೆ ಸಮಾನನಾದವರು ಇನ್ನೊಬ್ಬರಿಲ್ಲವೆಂದು ಪಂಡಿತರು ಎಲ್ಲಿ ಘೋಷಣೆ ಮಾಡಿದರು? | ಗೋದಾವರೀತೀರದಲ್ಲಿ | ೧೪,೧೫ ,೧೬ | |
| 40. | ಶೋಭನಭಟ್ಟರು ತನ್ನ ಪ್ರವಚನಗಳಲ್ಲಿ ಯಾರು ಹೇಳಿದ ಯುಕ್ತಿಗಳನ್ನು ಉದಾಹರಿಸುತ್ತಿದ್ದರು? | ಆನಂದತೀರ್ಥರ ಯುಕ್ತಿಗಳನ್ನು | ೨೦ | |
| 41. | ಜ್ಯೇಷ್ಠಯತಿಗಳಿಗೆ ಆನಂದತೀರ್ಥರನ್ನು ನೋಡಿ ಅಧಿಕ ಸಂತೋಷವಾಗಲು ಕಾರಣವೇನು? | ಆನಂದತೀರ್ಥರು ಕಳುಹಿಸಿದ ಭಾಷ್ಯವನ್ನು ಮೊದಲೇ ಅಧ್ಯಯನ ಮಾಡಿದ್ದರಿಂದ | ೩೧ | |
| 42. | ಗುರುಗಳಾದ ಅಚ್ಯುತಪ್ರೇಕ್ಷರು ಮೊದಲಿಗೆ ಆನಂದತೀರ್ಥರ ಭಾಷ್ಯಯವನ್ನು ಏಕೆ ಸ್ವೀಕರಿಸಲಿಲ್ಲ? | ಕಲಿಕಾಲ ಪ್ರಭಾವದಿಂದ ಅವರ ಮನಸ್ಸು ಜೀವಬ್ರಹ್ಮೈಕ್ಯಜ್ಞಾನದಿಂದ ಕಲುಷಿತವಾಗಿತ್ತು | ೩೩ | |
| 43. | ಅಹಂಕಾರದಿಂದ ಮೆರೆಯುತ್ತಿದ್ದ ದುಷ್ಟಯಾಜಕ ಯಾರು? | ಮರಡಿತ್ತಾಯ ಕುಲದ ಪಂಡಿತ | ೪೪ | |
| 44. | ಕ್ರೂರಸೈನಿಕರ ಮಧ್ಯೆ ನಡೆದು ಹೋಗುತ್ತಿದ್ದ ಶ್ರೀಮಧ್ವಾಚಾರ್ಯರು ಹೇಗೆ ಕಾಣಿಸುತ್ತಿದ್ದರು? | ನರಿಗಳ ಮಧ್ಯೆ ಹೋಗುತ್ತಿದ್ದ ಮೃಗರಾಜ ಸಿಂಹದ ಹಾಗೆ | ೧೩ | ೧೦ |
| 45. | ಶ್ರೀಮಧ್ವಾಚಾರ್ಯರನ್ನು ಗಂಗೆ ಯಾವ ರೂಪದಲ್ಲಿ ನಮಿಸಿದಳು? | ಸುಂದರವಾದ ಸ್ತ್ರೀರೂಪದಲ್ಲಿ ದೂರದಿಂದ ನಮಿಸಿದಳು | ೩೬ | |
| 46. | ಶ್ರೀಮಧ್ವಾಚಾರ್ಯರು ಬಲಶಾಲಿಗಳಾದ ಹದಿನೈದು ಶಿಷ್ಯರನ್ನು ಹೇಗೆ ಮಣಿಸಿದರು? | ಶಿಷ್ಯರನ್ನು ಒಂದೇ ಸಲಕ್ಕೆ ಕೆಳಕ್ಕೆ ಬೀಳಿಸಿ ಅವರ ಮೇಲೆ ಬೆರಳನ್ನಿಟ್ಟರೆ ಅದನ್ನು ಅವರಿಗೆ ಅಲುಗಾಡಿಸಲೂ ಆಗಲಿಲ್ಲ. | ೩೯,೩೦ | |
| 47. | ಕುರುಕ್ಷೇತ್ರದಲ್ಲಿ ಶ್ರೀಮಧ್ವಾಚಾರ್ಯರು ಸತ್ಯತೀರ್ಥ ಮೊದಲಾದವರಿಗೆ ಏನನ್ನು ತೋರಿಸಿದರು? | ತಾವು ಮಹಾಭಾರತಕಾಲದಲ್ಲಿ ಪ್ರಯೋಗಿಸಿದ ಗದೆ, ಹಾಗೂ ಮುಂದೆ ಮಾರೀಚನಾಗಿ ಹುಟ್ಟಿಬರಲಿರುವ ದುಷ್ಟನನ್ನು ತೋರಿಸಿದರು | ೪೯ | |
| 48. | ಹೃಷೀಕೇಶದಲ್ಲಿ ರುದ್ರದೇವರು ಶ್ರೀಮಧ್ವಾಚಾರ್ಯರನ್ನು ಹೇಗೆ ಸೇವಿಸಿದರು? | ಬ್ರಾಹ್ಮಣನ ವೇಷದಲ್ಲಿ ಪ್ರತ್ಯಕ್ಷರಾಗಿ ಶ್ರೀಮಧ್ವಾಚಾರ್ಯರನ್ನು ಭಿಕ್ಷೆಗೆ ಆಹ್ವಾನಿಸಿ, ಬ್ರಾಹ್ಮಣನೋರ್ವನಿಗೆ ಸ್ವಪ್ನದಲ್ಲಿ | ೫೦ | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| | | ಆದೇಶಕೊಟ್ಟು ಅವನ ಮೂಲಕ ಭಿಕ್ಷಾಸೇವೆಯನ್ನು ಮಾಡಿಸಿದರು | | |
| 49. | ಶ್ರೀಮಧ್ವಾಚಾರ್ಯರು ಗೋವಾದಲ್ಲಿ ತಮ್ಮ ಮಹಿಮೆಯನ್ನು ಹೇಗೆ ತೋರಿಸಿದರು? | ಶಂಕರನೆಂಬ ಬ್ರಾಹ್ಮಣನು ಭಿಕ್ಷೆಯ ಕೊನೆಯ ಸಂದರ್ಭದಲ್ಲಿ ತಂದುಕೊಟ್ಟ ೪೦೦೦ ಕದಲೀಫಲ ಮತ್ತು ೩೦ ಕೊಡ ಹಾಲನ್ನು ಕುಡಿಯುವ ಮೂಲಕ | ೫೨ | |
| 50. | ಮಧ್ವಶಾಸ್ತ್ರವನ್ನುಅಧ್ಯಯನ ಮಾಡಿ ಪರಮಾತ್ಮನ ದರ್ಶನ-ಅನುಗ್ರಹಪಡೆದ ಸಾಧಕರಿಗೆ ಲಭಿಸುವ ಮೋಕ್ಷದ ಬಗ್ಗೆ ಯಾರು ಯಾರಿಗೆ ವಿವರಣೆ ಕೊಟ್ಟರು? | ಶೇಷದೇವರು ಮುನಿಗಳಿಗೆ ಉಪದೇಶಿಸಿದರು | ೨,೩,೪, ೫ | |
| 51. | ಭಗವಂತನ ಪುರಕ್ಕೆ ಸದೃಶವಾದುದು ಯಾವುದು? | ಪ್ರಾಕಾರಗೋಡೆಗಳಲ್ಲಿ ಕಾಣುವ ಅದರ ಪ್ರತಿಬಿಂಬ | ೮ | |
| 52. | ಮುಕ್ತದಂಪತಿಗಳಲ್ಲಿ ಕಲಹಾದಿಗಳು ಯಾಕೆ ಇರುವುದಿಲ್ಲ? | ಮುಕ್ತಿಯಲ್ಲಿ ಯಾವುದೇ ದೋಷವಿಲ್ಲದ ಕಾರಣ | ೬೨ | |
| 53. | ಶ್ರೀಮಧ್ವಾಚಾರ್ಯರರನ್ನು ಹೇಗೆ ಸೋಲಿಸಬೇಕೆಂದು ವಿಚಾರ ಮಾಡಿದರು? | ಷಟ್ಕರ್ಮಪ್ರಯೋಗದಿಂದ | ೨೦ | ೧೨ |
| 54. | ದುಷ್ಟರು ಯಾರನ್ನು ಮುಂದಿಟ್ಟುಕೊಂಡು ಶ್ರೀಮಧ್ವಾಚಾರ್ಯರ ಜೊತೆಗೆ ವಾದಕ್ಕೆ ಹೋದರು? | ಪುಂಡರೀಕಪುರಿಯನ್ನು | ೨೬ | |
| 55. | ವೇದವ್ಯಾಖ್ಯಾನ ಮಾಡುತ್ತಿದ್ದ ಗೋವಿಂದ ಭಕ್ತರಾದ ಶ್ರೀಮಧ್ವಾಚಾರ್ಯರು ಹೇಗೆ ಶೋಭಿಸಿದರು? | ಬಾಲ್ಯದಲ್ಲಿ ಆಟವಾಡಿ ಶೋಭಿಸುತ್ತಿದ್ದ ಗೋವಿಂದನಂತೆ | ೩೨ | |
| 56. | ಐತರೇಯ ಶಾಖೆಯ ಆದಿಸೂಕ್ತ ಯಾವುದು? | ಅಗ್ನಿಸೂಕ್ತ | ೪೦ | |
| 57. | ಶ್ರೀಮಧ್ವಾಚಾರ್ಯರೆಂಬ ನರಸಿಂಹನು ಯಾವುದರಿಂದ ದುಷ್ಟವಾದಿಗಳನ್ನು ಖಂಡಿಸುತ್ತಾರೆ? | ಯುಕ್ತಿಗಳೆಂಬ ತೀಕ್ಷ್ಣ ನಖಗಳಿಂದ | ೫೧ | |
| 58. | ಪ್ರಾಗ್ರ್ಯವಾಟದಲ್ಲಿ ಚಾತುರ್ಮಾಸ್ಯ ವ್ರತವನ್ನು ಪೂರೈಸಿದ ಶ್ರೀಮಧ್ವಾಚಾರ್ಯರು ತಮ್ಮ ಸಂಚಾರವನ್ನು ಎಲ್ಲಿಗೆ ಮುಂದುವರಿಸಿದರು? | ಸಹ್ಯಪರ್ವತದ ಕಡೆಗೆ | ೧ | ೧೩ |
| 59. | ಜಯಸಿಂಹರಾಜನಿಂದ ಆದರಿಸಲ್ಪಟ್ಟ ಶ್ರೀಮಧ್ವಾಚಾರ್ಯ ಅವನೊಡನೆ ಎಲ್ಲಿಗೆ ಹೋದರು? | ವಿಷ್ಣುಮಂಗಲದ ಒಂದು ಉತ್ತಮ ದೇವಾಲಯದ ಬಳಿಗೆ ಹೋದರು | ೨೩ | |
| 60. | ವಿಷ್ಣುಮಂಗಲದ ದೇವಾಲಯದಲ್ಲಿ ಶ್ರೀಮಧ್ವಾಚಾರ್ಯರು ಯಾವುದರ ಪ್ರವಚನವನ್ನು ಮಾಡಿದರು? | ಭಾಗವತಪುರಾಣ | ೪೧ | |
| 61. | ಚಿಕ್ಕಬಾಲಕ ತ್ರಿವಿಕ್ರಮನು ಬಾಲ್ಯದಲ್ಲಿಯೇ ತನ್ನ ಪ್ರತಿಭೆಯನ್ನು ಹೇಗೆ ತೋರಿಸಿದ? | ಬಾಲ್ಯದಲ್ಲಿಯೇ ಛಂದೋಬದ್ಧವಾದ ಸಂಸ್ಕೃತ ಶ್ಲೋಕವನ್ನು ರಚಿಸುವ ಮೂಲಕ | ೪೭ | |
| 62. | ತ್ರಿವಿಕ್ರಮಪಂಡಿತರು ಯುವಕರಾಗಿ ಯಾರನ್ನೆಲ್ಲಾ ಸೋಲಿಸಿದರು? | ಭಾನುಪಂಡಿತ ಮೊದಲಾದವರನ್ನು | ೫೦ | |
| 63. | ಅದ್ವೈತ ಗ್ರಂಥಗಳ ಗಾತ್ರ ಎಷ್ಟು? | ಒಂದು ಲಕ್ಷದ ಇಪ್ಪತ್ತೈದು ಗ್ರಂಥಗಳು (ಗ್ರಂಥ- ೩೨ ಅಕ್ಷರಗಳು) | ೫೧ | |
| 64. | ಸುಬ್ರಹ್ಮಣ್ಯಪಂಡಿತರು ಮಗನಿಗೆ ಏನೆಂದು ಹೇಳಿದರು? | ಸುಖಮಯವಾದ ಮೋಕ್ಷದ ಪ್ರಾಪ್ತಿಗಾಗಿ ಶ್ರೀಕೃಷ್ಣನ ಆರಾದನೆ ಮಾಡು ಎಂಬುದಾಗಿ | ೫೨ | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 65. | ಆತ್ಮವಿಮರ್ಷೆ ಮಾಡಿಕೊಂಡ ತ್ರಿವಿಕ್ರಮಪಂಡಿತರು ಕೊನೆಗೆ ಎಂತಹ ಉಪಾಸನೆಯನ್ನು ಮಾಡುವುದಾಗಿ ನಿಶ್ಚಯಿಸಿಕೊಂಡರು ? | ಗುಣಪರಿಪೂರ್ಣನಾದ ಮುಕುಂದ ಉಪಾಸನೆಯನ್ನು ಮಾಡಬೇಕು | ೬೦ | |
| 66. | ತನ್ನ ಪಕ್ಷದ ಅದ್ವೈತಜನರ ಪ್ರಾರ್ಥನೆಯನ್ನು ಕೇಳಿದ ತ್ರಿವಿಕ್ರಮಪಂಡಿತರು ಏನು ಮಾಡಿದರು? | ತಾವು ತನ್ನವರ ಸಂಶಯಗಳನ್ನು ಪರಿಹರಿಸಬಲ್ಲೆನಾದರೂ ಶ್ರೀಮಧ್ವಾಚಾರ್ಯರನು ಜಯಿಸಬಲ್ಲೆನೇ ಎಂದು ಸಂಶಯಪಟ್ಟರು | ೬೫ | |
| 67. | ಪದ್ಮತೀರ್ಥ ಮೊದಲಾದವರು ಅಪಹರಿಸಿದ್ದ ಗ್ರಂಥಭಂಡಾರವನ್ನು ಶ್ರೀಮಧ್ವಾಚಾರ್ಯರ ಆದೇಶದಂತೆ ರಾಜನ ಸಮ್ಮುಖದಲ್ಲಿ ಯಾರು ಸ್ವೀಕರಿಸಿದರು? | ತ್ರಿವಿಕ್ರಮಪಂಡಿತರ ತಮ್ಮನಾದ ಶಂಕರಪಂಡಿತರು | ೨ | ೧೪ |
| 68. | ಶ್ರೀಮಧ್ವಾಚಾರ್ಯರು ತಮ್ಮ ಪ್ರಾತರಾಹ್ನಿಕಗಳನ್ನು ಯಾವಾಗ ಮಾಡುತ್ತಿದ್ದರು? | ಅರಣೋದಯಕಾಲದಲ್ಲಿ | ೭ | |
| 69. | ಶಿಷ್ಯರ ಬಳಿ ಇದ್ದ ಓಲೆ ಗ್ರಂಥಗಳು ಹೇಗೆ ಶೋಭಿಸುತ್ತಿದ್ದವು? | ಸಜ್ಜನರ ಬುದ್ಧಿಯಲ್ಲಿ ವಿಷಯವಾಗಿರುವ ಪರಮಾತ್ಮನ ಹಾಗೆ ಶೋಭಿಸುತ್ತಿದ್ದವು | ೧೯ | |
| 70. | ಶ್ರೀಮಧ್ವಾಚಾರ್ಯರು ಮಾಧ್ಯಾಹ್ನಿಕ ಸ್ನಾನಕ್ಕೆ ಯಾವಾಗ ಹೊರಟರು? | ಸೂರ್ಯನು ಮಧ್ಯ ಭಾಗದಿಂದ ಪಶ್ಚಿಮ ಭಾಗಕ್ಕೆ ಸ್ವಲ್ಪ ವಾಲಿದಾಗ | ೨೬ | |
| 71. | ಹರಿಪ್ರಸಾದವನ್ನು ಸ್ವೀಕರಿಸುವಾಗ ಶ್ರೀಮಧ್ವಾಚಾರ್ಯರ ಅನುಸಂಧನ ಹೇಗಿತ್ತು? | ಶ್ರೀಕೃಷ್ಣನು ಸಂತುಷ್ಟನಾಗಲಿ ಎಂದು | ೩೯ | |
| 72. | ಶ್ರೀಮಧ್ವಾಚಾರ್ಯರು ತ್ರಿವಿಕ್ರಮಪಂಡಿತರನ್ನು ಎಲ್ಲಿ ನೋಡಿದರು? | ಪಾಡಿಕುಡಲ್ ಎಂಬ ಗ್ರಾಮದಲ್ಲಿ ಕೂಡಲು ಎಂಬ ದೇವಾಲಯದಲ್ಲಿ ಬ್ರಹ್ಮಸೂತ್ರಗಳ ವ್ಯಾಖ್ಯಾನ ಸಂದರ್ಭದಲ್ಲಿ ನೋಡಿದರು | ೧,೨ | ೧೫ |
| 73. | ಶ್ರೀಮಧ್ವಾಚಾರ್ಯರ ಉಪನ್ಯಾಸ ಎಂಬ ಸೇನೆಯಲ್ಲಿದ್ದ ಚತುರಂಗಗಳು ಯಾವುವು? | ಬ್ರಹ್ಮಸೂತ್ರಎಂಬ ರಥ, ಶ್ರುತಿಗಳೆಂಬ ಆನೆ, ಯುಕ್ತಿಗಳೆಂಬ ಪದಾತಿ, ಸ್ಮೃತಿಗಳೆಂಬ ಕುದುರೆ | ೫ | |
| 74. | ಶ್ರೀಮಧ್ವಾಚಾರ್ಯರ ಉಪನ್ಯಾಸದ ಮುಖ್ಯ ವಿಷಯ ಯಾವುದಾಗಿತ್ತು? | ಬ್ರಹ್ಮನೆಂದು ಕರೆಯಲ್ಪಡುವ ಗುಣಪೂರ್ಣನಾದ ನಾರಾಯಣನು ವೇದಪ್ರತಿಪಾದ್ಯನಾಗಿದ್ದಾನೆ | ೮ | |
| 75. | ಈಶ್ವರನ ಅಜ್ಞತ್ವಕ್ಕೆ ವಿರೋಧಿಯಾದ ಶ್ರುತಿಯು ಯಾವುದು? | ಯಃ ಸರ್ವಜ್ಞಃ ಸ ಸರ್ವವಿತ್ | ೧೮ | |
| 76. | ಹಿರಿಯನಾದ ಬೌದ್ಧನನ್ನು ಖಂಡಿಸಿದ್ದರಿಂದ ಮಾಯಾವಾದಿಯೂ ಹೇಗೆ ಖಂಡಿತನಾಗುತ್ತಾನೆ? | ಎರಡೂ ಮತದಲ್ಲಿಯೂ ಯಾವುದೇ ವ್ಯತ್ಯಾಸವಿಲ್ಲದ ಕಾರಣ | ೩೮ | |
| 77. | ಶ್ರೀಮಧ್ವಾಚಾರ್ಯರ ಭಾಷ್ಯ ಸಮುದ್ರದಲ್ಲಿ ಸಿಗುವ ಅಸಂಖ್ಯ ರತ್ನಗಳು ಯಾವುವು? | ನ್ಯಾಯಗಳು | ೭೩ | |
| 78. | ದಶೋಪನಿಷದ್ಭಾಷ್ಯಗಳು ಹೇಗೆ ಶೋಭಿಸುತ್ತವೆ? | ಉಪನಿಷತ್ತುಗಳೆಂಬ ದೇವತಾಸ್ತ್ರೀಯರನ್ನು ಭಾಷ್ಯದ ಅರ್ಥಗಳೆಂಬ ದೇವತೆಗಳು ಈ ಭಾಷ್ಯಎಂಬ ಮನೆಯಲ್ಲಿ ಸಂತೋಷಗೊಳಿಸುತ್ತಿವೆ | ೭೪ | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 79. | ಭಾಗವತತಾತ್ಪರ್ಯನಿರ್ಣಯವು ಹೇಗೆ ವಿಶಿಷ್ಟವಾಗಿದೆ? | ಪುರಾಣಗಳ ಭಾಷಾ ತ್ರೈವಿಧ್ಯ (ಸಮಾಧಿ, ಗುಹ್ಯ,ದರ್ಶನ) ತಿಳಿಸುವುದರಿಂದ | ೭೭ | |
| 80. | ತಂತ್ರಸಾರಸಂಗ್ರಹವು ಸಾಧಕರಿಗೆ ಹೇಗೆ ಫಲದಾಯಕವಾಗಿದೆ | ದೇವಲೋಕದ ಕಲ್ಪವೃಕ್ಷದ ರೀತಿಯಲ್ಲಿ | ೭೮ | |
| 81. | ಸಜ್ಜನರಿಗೆ ವಾದಪ್ರಕ್ರಿಯನ್ನು ತಿಳಿಸುವ ಎರಡು ಕಣ್ಣುಗಳಂತಿರುವ ಗ್ರಂಥಗಳು ಯಾವುವು? | ಕಥಾಲಕ್ಷಣ ಮತ್ತು ಪ್ರಮಾಣಲಕ್ಷಣ | ೭೯ | |
| 82. | ಶತ್ರುಗಳನ್ನು ಏಕಾಕಿಯಾಗಿ ಸದೆಬಡಿದ ಅರ್ಜುನನಂತೆ ವಿರೋಧಿಮತಗಳನ್ನು ಮಣಿಸಿದ ಸ್ವತಂತ್ರ ಕೃತಿ ಯಾವುದು? | ತತ್ತ್ವನಿರ್ಣಯಗ್ರಂಥ | ೮೦ | |
| 83. | ಅಣುಭಾಷ್ಯವು ಹೇಗೆ ಮಹತ್ವಪೂರ್ಣವಾಗಿದೆ? | ಬಾಲಕೃಷ್ಣನ ಪುಟ್ಟಬಾಯಿಯ ಒಳಗೆ ಬ್ರಹ್ಮಾಂಡ ಕಂಡ ರೀತಿಯಲ್ಲಿ ಚಿಕ್ಕದಾದ ಅಣುಭಾಷ್ಯದಲ್ಲಿ ಸಕಲ ಪ್ರಮೇಯಾರ್ಥಗಳೂ ತುಂಬಿವೆ | ೮೧ | |
| 84. | ತಾರಕಾಸುರ ಸಂಹರಕ್ಕಾಗಿ ದೇವತಗಳು ಸ್ಕಂದನನ್ನು ಅಪೇಕ್ಷಿಸಿದಂತೆ ತ್ರಿವಿಕ್ರಮಪಂಡಿತರು ಪ್ರಾರ್ಥಿಸಿ ಶ್ರೀಮಧ್ವಾಚಾರ್ಯರಿಂದ ರಚಿತವಾದ ಗ್ರಂಥ ಯಾವುದು? | ಅನುವ್ಯಾಖ್ಯಾನ | ೮೭,೮೮ | |
| 85. | ಶ್ರೀಮಧ್ವಾಚಾರ್ಯರು ಅನುವ್ಯಾಖ್ಯಾನವನ್ನು ರಚಿಸಿದ ಕ್ರಮ ಹೇಗಿತ್ತು? | ಏಕಕಾಲದಲ್ಲಿ ನಾಲ್ಕು ಶಿಷ್ಯರಿಂದ ಬರೆಸಿದರು | ೮೯ | |
| 86. | ಅನುವ್ಯಾಖ್ಯಾನದ ಯುಕ್ತಿಗಳ ಸಂಗ್ರಹ-ಸ್ಪಷ್ಟೀಕರಣವನ್ನು ಮಾಡಿದ ಗ್ರಂಥ ಯಾವುದು? | ನ್ಯಾಯವಿವರಣ | ೯೦ | |
| 87. | ತಮ್ಮನಿಗೆ ಪ್ರಣವೋಪದೇಶವನ್ನು ಮಾಡಿ ಏನೆಂದು ನಾಮಕರಣವನ್ನು ಮಾಡಿದರು? | ವಿಷ್ಣುತೀರ್ಥ | ೯೮ | |
| 88. | ಶಿಷ್ಯನ ಮೇಲಿನ ಗುರುಗಳ ಕರುಣೆ ಯಾವಾಗ ವೃದ್ಧಿಗೊಳ್ಳುತ್ತದೆ? | ಇಂದ್ರಿಯನಿಗ್ರಹ, ಭಕ್ತಿ, ಮಾತಿನಲ್ಲಿ ಮಧುರತೆ, ನಿರಂತರ ಸೇವೆ ಇವುಗಳಿದ್ದಾಗ ವೃದ್ಧಿಗೊಳ್ಳುತ್ತದೆ | ೧೦೦ | |
| 89. | ಶ್ರೀಮಧ್ವಾಚಾರ್ಯರ ಶಿಷ್ಯರಲ್ಲಿ ಮೊದಲಿಗರೆಂದು ಪ್ರಸಿದ್ಧರಾದವರು ಯಾರು? | ವಿಷ್ಣುತೀರ್ಥರು | ೧೦೧ | |
| 90. | ಸುಖದುಃಖ, ಮಾನಾಪಮಾನ ಮೊದಲಾದ ದ್ವಂದರೂಪ ಬೆಂಕಿಗೆ ಇಂಧನ ಯಾವುದು? | ಅಶನಪಾನಗಳು | ೪೦೫ | |
| 91. | ಶ್ರೀಮಧ್ವಾಚಾರ್ಯರಿಂದ ಆಕರ್ಷಿತರಾದ ಶೋಭನಭಟ್ಟರು ಸನ್ಯಾಸ ಸ್ವೀಕರಿಸಿ ಯಾವ ನಾಮವನ್ನು ಪಡೆದರು? | ಪದ್ಮನಾಭತೀರ್ಥ | ೧೨೦ | |
| 92. | ಶ್ರೀಮಧ್ವಾಚಾರ್ಯರ ಪದ್ಮನಾಭತೀರ್ಥರ ಯಾವ ಗುಣಗಳಿಂದ ಸಂತುಷ್ಟರಾಗಿ ಸದ್ವಿದ್ಯೆಯನ್ನು ಧಾರೆ ಎರೆದರು? | ಶ್ರವಣ, ಮನನ, ವೈರಾಗ್ಯ, ಭಕ್ತಿ, ನಿತ್ಯಸೇವೆ ಮೊದಲಾದ ಗುಣಗಳಿಂದ ಸಂತುಷ್ಟರಾದರು | ೧೨೧ | |
| 93. | ಪದ್ಮನಾಭತೀರ್ಥರು ರಚಿಸಿದ ಗ್ರಂಥ ಯಾವುದು? | ಸನ್ನ್ಯಾಯರತ್ನಾವಲೀ | ೧೨೫ | |
| 94. | ವೇದೋಕ್ತಫಲ ಎಲ್ಲವೂ ಸುಳ್ಳು ಎಂಬುದಕ್ಕೆ ನಾಸ್ತಿಕ ರಾಜ ಕೊಟ್ಟ ದೃಷ್ಟಾಂತ ಯಾವುದು? | ಕತ್ತೆಯ ಕೊಂಬು | ೪ | ೧೬ |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 95. | ನಾಸ್ತಿಕ ಆಕ್ಷೇಪವನ್ನು ಶ್ರೀಮಧ್ವಾಚಾರ್ಯರು ಹೇಗೆ ಪರಿಹರಿಸಿದರು? | ಓಷಧೀಸೂಕ್ತಪಠನದಿಂದ ತತ್ಕಾಲದಲ್ಲಿ ಬೀಜದಿಂದ ಅಂಕುರ ಎಲೆ ಹೂ ಗಳನ್ನು ಸೃಷ್ಟಿಸಿದರು | ೫ | |
| 96. | ಗ್ರಹಣಕಾಲದಲ್ಲಿ ಸಮುದ್ರತೀರದಲ್ಲಿ ಶಿಷ್ಯರೊಂದಿಗೆ ಬಂದಿದ್ದ ಶ್ರೀಮಧ್ವಾಚಾರ್ಯರರನ್ನು ಕೆಲ ದುಷ್ಟರು ನಿಂದಿಸಿದಾಗ ಯಾರು ತಡೆದ ಹಾಗೆ ಇತ್ತು? | ಸಮುದ್ರರಾಜನು ತನ್ನ ದೊಡ್ಡ ತೆರೆಗಳಿಂದ ತಡೆದಂತೆ ಇತ್ತು | ೧೩ | |
| 97. | ದುಷ್ಟರ ನಿಂದನೆಯ ಮಾತುಗಳಿಗೆ ಶ್ರೀಮಧ್ವಾಚಾರ್ಯರು ಹೇಗೆ ಪ್ರತಿಕ್ರಿಯೆಯನ್ನು ಕೊಟ್ಟರು? | ಸಿಂಹವು ನರಿಗಳ ಮಾತುಗಳನ್ನು ತಿರಸ್ಕರಿಸುವಂತೆ ಕಡೆಗಣಿಸಿದರು | ೨೨ | |
| 98. | ಶ್ರೀಮಧ್ವಾಚಾರ್ಯರ ಆದೇಶದಿಂದ ಅವರ ಪ್ರವಚನದ ಧ್ವನಿಯನ್ನು ಕಮ್ಮಿ ಮಾಡಲು ಪ್ರಯತ್ನಿಸಿದ ಜಟ್ಟಿ ಯಾರು? | ಪೂರ್ವವಾಟ (ಮೂಡೆಂಬಾಡಿತ್ತಾಯ) | ೩೧ | |
| 99. | ಯಾವ ಜಟ್ಟಿಗಳಿಗೂ ಬಲದಲ್ಲಿ ಶ್ರೀಮಧ್ವಾಚಾರ್ಯರನ್ನು ಮಣಿಸಲು ಆಗದಿದ್ದಾಗ ಜನರು ಏನೆಂದುಕೊಂಡರು? | ಇವರು ಭೀಮನೇ ಆಗಿರಬೇಕೆಂದುಕೊಂಡರು | ೩೩ | |
| 100. | ಶ್ರೀಮಧ್ವಾಚಾರ್ಯರು ಯಾವ ಊರಿನಲ್ಲಿ ಪಾಳುಬಿದ್ದ ದೇವಾಲಯದಲ್ಲಿ ಪೂಜಾದಿಗಳ ವ್ಯವಸ್ಥೆಯನ್ನು ಕೇವಲ ಅರ್ಧದಿನದಲ್ಲಿ ಮಾಡಿ ತಮ್ಮ ಸಾಮರ್ಥ್ಯವನ್ನು ತೋರಿಸಿಕೊಟ್ಟರು? | ಪಾರಂತೀ (ಕೇವುಡದೇವಲ) | ೩೬ | |
| 101. | ಯಜ್ಞಪ್ರಕ್ರಿಯಯ ಬಗೆಗೆ ಶ್ರೀಮಧ್ವಾಚಾರ್ಯರನ್ನು ಪ್ರಶ್ನಿಸಿ ಕುಹಕಿಗಳು ಸೋತು ಹೋದ ಜಾಗ ಯಾವುದು? | ಉಚ್ಚಭೂತಿ (ಉಜಿರೆ) | ೪೧ | |
| 102. | ಉಜಿರೆಯಲ್ಲಿ ಶ್ರೀಮಧ್ವಾಚಾರ್ಯರು ರಚಿಸಿದ ಗ್ರಂಥ ಯಾವುದು? | ಕರ್ಮನಿರ್ಣಯ | ೪೫ | |
| 103. | ಭಟ್ಟ ಎಂದು ಯಾರನ್ನು ಕರೆಯುತ್ತಿದ್ದರು? | ಮಹಾಭಾರತ, ಪುರಾಣಗಳ ರಹಸ್ಯವನ್ನುತಿಳಿದವರನ್ನು. | 14 | ಸರ್ಗ -2 |
| 104. | ಮಧ್ವಾಚಾರ್ಯರ ಬಾಲ್ಯದ ಹೆಸರಾದ 'ವಾಸುದೇವ' ಹೆಸರಿನ ಅರ್ಥವೇನು? | ಜ್ಞಾನಪ್ರಚಾರಕ್ಕಾಗಿ ಅವತರಿಸಿದ ಪ್ರಾಣದೇವರು (ಮಧ್ವಾಚಾರ್ಯರು) / ವಾಸುದೇವಕೃಷ್ಣನ ಪಾದಗಳಲ್ಲಿ ಅನನ್ಯ ಭಕ್ತಿಯುಳ್ಳವರು | 29 | |
| 105. | ತಾನು ಸನ್ಯಾಸಸ್ವೀಕರಿಸಲು ಬಯಸಿದಾಗ ಅದಕ್ಕೆ ಮಹಾವಿಷ್ಣುವಿನ ಅನುಜ್ಞೆಪಡೆಯುವುದಕ್ಕಾಗಿ ವಾಸುದೇವನು ಏನು ಮಾಡಿದನು? | ಎಲ್ಲಾ ವಸ್ತುಗಳಲ್ಲಿ ಸರ್ವತ್ರ ವ್ಯಾಪ್ತವಾದ ಭಗವಂತನನ್ನು ನಮಸ್ಕರಿಸಿದನು | 4 | ಸರ್ಗ -4 |
| 106. | ವಾಸುದೇವನ ಸನ್ಯಾಸಸ್ವೀಕಾರದ ಮುಖ್ಯ ಉದ್ದೇಶವೇನು? | ಶ್ರೀಹರಿಯ ಪ್ರಸನ್ನತೆ | 31 | 4 |
| 107. | ಪೂರ್ಣಪ್ರಜ್ಞರಿಗೆ ಸನ್ಯಾಸಿಯ ಆಚರಣೆಗಳನ್ನು ಹೇಳಿಕೊಡುವ ಸಂದರ್ಭದಲ್ಲಿ ಅಚ್ಯುತಪ್ರೇಕ್ಷಾಚಾರ್ಯರಿಗೆ ಏಕೆ ಆಶ್ಚರ್ಯವಾಯಿತು? | ಶಿಷ್ಯನಿಂದಲೇ ವಿಶೇಷ ಆಚರಣೆಗಳು ತಿಳಿದುಕೊಂಡು ಆಶ್ಚರ್ಯಪಟ್ಟರು | 36 | 4 |
| 108. | ತಾನು ಸನ್ಯಾಸಸ್ವೀಕರಿಸಲು ಬಯಸಿದಾಗ ಅದಕ್ಕೆ ಮಹಾವಿಷ್ಣುವಿನ ಅನುಜ್ಞೆಪಡೆಯುವುದಕ್ಕಾಗಿ ವಾಸುದೇವನು ಏನು ಮಾಡಿದನು? | ಎಲ್ಲಾ ವಸ್ತುಗಳಲ್ಲಿ ಸರ್ವತ್ರ ವ್ಯಾಪ್ತವಾದ ಭಗವಂತನನ್ನು ನಮಸ್ಕರಿಸಿದನು | 4 | 4 |
| 109. | ಆನಂದತೀರ್ಥರ ಉಪದೇಶದ ಮುಖ್ಯ ತಿರುಳು ಏನು? | ವಿಷ್ಣುವಿಗೆ ಸದೃಶನಾದವನು ಇನ್ನೊಬ್ಬನಿಲ್ಲ. | 47 | ಸರ್ಗ 6 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 110. | ರಮೆಯೂ (ಲಕ್ಷ್ಮೀ) ಕೂಡ ಯಾವುದರಲ್ಲಿ ಅಸಮರ್ಥಳು? | ವೇದವ್ಯಾಸರ ಪಾದದ ಉಗುರಿನ ಅಗ್ರಭಾಗದ ಅನಂತ ಗುಣಗಳನ್ನು ವರ್ಣಿಸುವುದರಲ್ಲಿ ಅಸಮರ್ಥಳು | 46 | ಸರ್ಗ 7 |
| 111. | ಆನಂದತೀರ್ಥರು ಮತ್ತು ವೇದವ್ಯಾಸರು ಯಾಕಾಗಿ ಭೂಮಿಯಲ್ಲಿ ಅವತರಿಸಿದರು? | ಸಜ್ಜನರಿಗೆ ಸರಿಯಾದ ತತ್ತ್ವಜ್ಞಾನವನ್ನು ಕೊಡಲಿಕ್ಕಾಗಿ | 59 | 7 |
| 112. | ಭಗವಂತನು ಏತಕ್ಕಾಗಿ ಅನೇಕ ಅವತಾರಗಳನ್ನು ತಳೆಯುತ್ತಾನೆ? | ಸ್ಮರಣೆ ಮತ್ತು ಕೀರ್ತನೆಯಿಂದ ಸಜ್ಜನರು ಮೋಕ್ಷವನ್ನು ಪಡೆಯಲಿ ಎಂದು | 13 | ಸರ್ಗ 8 |
| 113. | ಆರಂಭದಲ್ಲಿ ವೇದವನ್ನು ಅಪಹರಿಸಿದ ದೈತ್ಯ ಯಾರು? | ಹಯಗ್ರೀವಾಸುರ | 14 | 8 |
| 114. | ಮಹಿದಾಸನಾಗಿ ಭಗವಂತನು ಯಾರಲ್ಲಿ ಅವತರಿಸಿದ? | ಇತರಾದೇವಿಯಲ್ಲಿ | 35 | 8 |
| 115. | ಕಲಿಯುಗದಲ್ಲಿ ಸಜ್ಜನರು ಹೇಗಿರುತ್ತಾರೆ? | ಕೆಸರಲ್ಲಿ ಮುಳುಗಿದ ಮಣಿಗಳಂತೆ | 50 | 8 |
| 116. | ಆನಂದತೀರ್ಥರನ್ನು ಜ್ಞಾನಪ್ರಚಾರದಲ್ಲಿ ಪ್ರೇರೇಪಿಸಿದವರು ಯಾರು? | ಧರ್ಮಕುಮಾರರಾದ ನಾರಾಯಣಮುನಿಗಳು | 1 | ಸರ್ಗ -9 |
| 117. | ಆನಂದತೀರ್ಥರಿಗೆ ಶ್ರೀಹರಿಯ ವಿರಹ ಯಾವುತ್ತೂ ಇರದು, ಯಾಕೆ? | ಆನಂದತೀರ್ಥರ ಹೃದಯವು ಭಗವಂತನಿಗೆ ಅತ್ಯಂತಪ್ರಿಯವಾದ ಆವಾಸಸ್ಥಾನವಾದ್ದರಿಂದ | 4 | 9 |
| 118. | ಅನಂದತೀರ್ಥರ ಇನ್ನೊಂದು ರೂಪವೆಂದು ಪ್ರಸಿದ್ಧವಾದದ್ದು ಯಾವುದು ? | ಅವರು ರಚನೆ ಮಾಡಿದ ಬ್ರಹ್ಮಸೂತ್ರಭಾಷ್ಯ | 11 | 9 |
| 119. | ಆನಂದತೀರ್ಥರ ಬ್ರಹ್ಮಸೂತ್ರಭಾಷ್ಯಕ್ಕೆ ಪೂರ್ವದಲ್ಲಿ ಎಷ್ಟು ಭಾಷ್ಯಗಳು ರಚಿತವಗಿದ್ದವು? | ಇಪ್ಪತ್ತೊಂದು | 12 | 9 |
| 120. | ಶ್ರೀಮಧ್ವಾಚಾರ್ಯರು ತಮ್ಮ ಶಿಷ್ಯರನ್ನು ಗಂಗೆಯ ಇನ್ನೊಂದು ತೀರಕ್ಕೆ ಹೇಗೆ ತಲಪಿಸಿದರು? - | ಒಬ್ಬರು ಇನ್ನೊಬ್ಬರನ್ನು ಆಶ್ರಯಿಸುವಂತೆ ಆದೇಶಿಸಿ ದೋಣಿ ಇಲ್ಲದೇ ದಾಟಿಸಿದರು | 9 | ಸರ್ಗ 10 |
| 121. | ಗಂಗೆಯನ್ನು ದಾಟಿಸುವುದರ ಜೊತೆಗೆ ಮತ್ತೇನನ್ನು ದಾಟಿಸಿದರು? | ಮರಣದ ಭಯವನ್ನು | 12 | |
| 122. | ಶ್ರೀಮಧ್ವಾಚಾರ್ಯರ ಸೇವೆಗಾಗಿ ಗಂಗೆ ಹೇಗೆ ಬಂದಳು? | ಭೂಮಿಯನ್ನು ಭೇದಿಸಿ ತಾನು ಶಾಖೆಯಾಗಿ ಕಾಣಿಸಿಕೊಂಡಳು | 35 | |
| 123. | ನೂರಾರು ಸೇವಕಿಯರಿದ್ದರೂ ಶ್ರೀಲಕ್ಷ್ಮೀದೇವಿಯು ಹೇಗೆ ಪತಿಸೇವೆಯನ್ನು ಮಾಡುತ್ತಾಳೆ? | ತಾನೇ ಮನೆಯ ಕೆಲಸಗಳನ್ನು ಪೂರೈಸುವ ಮೂಲಕ | 16 | ಸರ್ಗ 11 |
| 124. | ಶೃಂಗಾರ ಮೊದಲಾದ ಎಲ್ಲರಸಗಳಿಗೂ ಶೋಭೆತರುವಂತಹದ್ದು ಯಾವುದು? | ವಿನಯ | 54 | 11 |
| 125. | ಶ್ರೀಮಧ್ವಾಚಾರ್ಯರನ್ನು ಸಮೀಪಿಸಲಾಗದ ದೂರದೇಶದ ಜನರು ಹೇಗೆ ತಮ್ಮ ಸಾಂಸಾರಿಕ ದುಃಖವನ್ನು ನೀಗಿಸಿಕೊಳ್ಳುತ್ತಿದ್ದರು? | ಶ್ರೀಮಧ್ವಾಚಾರ್ಯರ ಕೀರ್ತಿಯನ್ನು ಕೇಳಿ | 6 | ಸರ್ಗ 13 |
| 126. | ಶ್ರೀಮಧ್ವಾಚಾರ್ಯರು ತಮ್ಮ ಪ್ರವಚನವನ್ನು ಹೇಗೆ ಪ್ರಾರಂಭಿಸಿದರು? | ಓಂಕಾರವನ್ನು ಉಚ್ಚರಿಸುವ ಮೂಲಕ | 23 | 14 |
| 127. | ಶ್ರೀಮಧ್ವಾಚಾರ್ಯರು ತಮ್ಮ ಗರಿಮಾ ಸಾಮರ್ಥ್ಯವನ್ನು ಹೇಗೆ ತೋರಿಸಿದರು? | ಜನರ ನೂಕುನುಗ್ಗಲಿಂದಾಗಿ ದೂರದಲ್ಲಿ ಇರುವರವರಿಗೂ ಕೂಡ ತಮ್ಮ ಎದೆಯ ಮೇಲ್ಭಾಗದ ದರ್ಶನವನ್ನು ಕೊಡುವ ಮೂಲಕ | 37 | 13 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 128. | ನಾರಾಯಣ ಪಂಡಿತಾಚಾರ್ಯರು ಮಧ್ವ ವಿಜಯವನ್ನು ರಚಿಸುವ ಉದ್ದೇಶವೇನು ? | ಗುರುಭಕ್ತಿಯಿಂದ ಹುಟ್ಟುವ ಹರಿಭಕ್ತಿಗಾಗಿ | 05 | 01 |
| 129. | ಈಗಲೂ ಹನುಮಂತ ರಾಮಕಥಾ ಕೀರ್ತನೆಯಲ್ಲಿ ಮುಳುಗಿರುವ ಸ್ಥಳ ಯಾವುದು? | ಕಿಂಪುರುಷ | 27 | 01 |
| 130. | ಮುಖ್ಯಪ್ರಾಣದೇವರ ಅವತರಣವಾದ ಸ್ಥಳ ಯಾವುದು? | (ಉಡುಪಿ) ರಜತಪೀಠಪುರ | 24 | 02 |
| 131. | ಅಶ್ವಮೇಧಕ್ಕೂ ಮಿಗಿಲಾದ ಫಲ ಯಾವುದರಿಂದ ಸಿಗುತ್ತದೆ? | ಹರಿ ನಮಸ್ಕಾರ | 02 | 06 |
| 132. | ಮಧ್ಯಗೇಹಭಟ್ಟರು ಪ್ರವಚನ ಮಾಡುವಾಗ ಯಾವ ಶಬ್ದದ ಅರ್ಥವನ್ನು ಹೇಳಿರಲಿಲ್ಲ ? | ಲಿಕುಚ | 29 | 03 |
| 133. | ಜಗದ್ಗುರುಗಳಾದ ಮಧ್ವಾಚಾರ್ಯರು ಗುರುಗಳನ್ನು ಅನ್ವೇಷಿಸಿದ ಹಿನ್ನಲೆ ಏನು? | ಗುರುಗಳ ಅನ್ವೇಷಣೆ ಮುಖ್ಯ ಕರ್ತವ್ಯ ಎಂದು ಲೋಕಕ್ಕೆ ತಿಳಿಸಲು | 04 | 05 |
| 134. | ಈಗಲೂ ಹನ್ನೆರಡು ವರ್ಷಕ್ಕೊಮ್ಮೆ ಉಡುಪಿಯ ಸರೋವರಕ್ಕೆ ಗಂಗಾದೇವಿಯು ಬರುವುದು ಏತಕ್ಕಾಗಿ ? | ಮಧ್ವಾಚಾರ್ಯರ ವೈಶಿಷ್ಟ್ಯವನ್ನು ಜಗತ್ತಿಗೆ ತಿಳಿಸಲು | 42 | 04 |
| 135. | ಮಧ್ವಾಚಾರ್ಯರಿಗೆ ಬ್ರಹ್ಮಸೂತ್ರ ಭಾಷ್ಯೆಯನ್ನು ರಚಿಸಬೇಕೆಂದು ಪ್ರಾರ್ಥಿಸಿಕೊಂಡವರು ಯಾರು? | ಲಿಕುಚಕುಲದ ಜೇಷ್ಠಯತಿಗಳು | 27 | 05 |
| 136. | ಭೋಜನದ ಬಳಿಕ 200 ಬಾಳೆಹಣ್ಣುಗಳನ್ನು ತಿಂದು ಜೀರ್ಣಿಸಿಕೊಂಡ ಮಧ್ವಾಚಾರ್ಯರ ಸಾಮರ್ಥ್ಯವನ್ನು ಅಚ್ಯುತಪ್ರೇಕ್ಷರು ಪ್ರಶ್ನಿಸಿದಾಗ ಮಧ್ವಾಚಾರ್ಯರು ಏನೆಂದರು? | ಹೆಬ್ಬೆರಳಿನ ಗಾತ್ರದ ಜಠರಾಗ್ನಿ ಇರುವುದರಿಂದ ಜೀರ್ಣವಾಗುತ್ತದೆ | 33 | 05 |
| 137. | ವೇದಗಳಿಗೆ ಮೂರು ಅರ್ಥಗಳಿದ್ದರೆ ಮಹಾಭಾರತಕ್ಕೆ ಎಷ್ಟು ಅರ್ಥ ? | 10 | 04 | 06 |
| 138. | ಮಧ್ವಾಚಾರ್ಯರು ಮೊದಲು ಬದರಿಯಾತ್ರೆಗೆ ಹೋಗುವ ಮುನ್ನ ರಚಿಸಿದ ಗ್ರಂಥ ಯಾವುದು? | ಗೀತಾಭಾಷ್ಯ | 32 | 06 |
| 139. | ಸತ್ಯತೀರ್ಥರು ಮಧ್ವಾಚಾರ್ಯರ ಬಳಿ ಎಷ್ಟು ಬಾರಿ ಐತರೇಯ ಶ್ರುತಿಯ ಅರ್ಥವನ್ನು ಕೇಳಿದ್ದಾರೆ? | ಮೂರು ಬಾರಿ | 50 | 06 |
| 140. | ವೇದವ್ಯಾಸರಿಂದ ರಚಿತವಾದ ಗ್ರಂಥಗಳು ಯಾವುವು? | ಮಹಾಭಾರತ, 18 ಪುರಾಣಗಳು ಮತ್ತು ಬ್ರಹ್ಮಸೂತ್ರ | 20 | 07 |
| 141. | ನಾರಾಯಣಾಶ್ರಮದಲ್ಲಿ ನಾರಾಯಣನು ಮಧ್ವಾಚಾರ್ಯರಿಗೆ ಮಾಡಿದ ಆದೇಶವೇನು? | ಬ್ರಹ್ಮಸೂತ್ರಭಾಷ್ಯರಚನೆ | 47 | 08 |
| 142. | ಶಾಸ್ತ್ರ ಅಧ್ಯಯನ ಮಾಡುವವರಿಗೆ ಬರುವ ವಿಘ್ನಗಳನ್ನು ಪರಿಹರಿಸಿಕೊಳ್ಳಲು ಏನು ಮಾಡಬೇಕು? | ಉಡುಪಿ ಶ್ರೀಕೃಷ್ಣನ ದರ್ಶನ | 40 | 09 |
| 143. | ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಯಾರ ಆದೇಶದಂತೆ ಎಲ್ಲಿ ರಚಿಸಿದರು? | ವೇದವ್ಯಾಸರ ಆದೇಶದಂತೆ ಉಡುಪಿಯಲ್ಲಿ | 25 | 10 |
| 144. | ಮಧ್ವಾಚಾರ್ಯರ ಗ್ರಂಥಗಳ ಅಧ್ಯಯನದ ಫಲಗಳೇನು? | ಮುಖ್ಯಫಲ ಮೋಕ್ಷ ಮತ್ತು ಅಮುಖ್ಯಫಲ ಸ್ವರ್ಗಾದಿಗಳು | 06 | 11 |
| 145. | ಮಾಯಾವಾದಿಗಳೂ ಮಧ್ವಾಚಾರ್ಯರ ಭಾಷ್ಯಯನ್ನು ಸ್ತುತಿಸಿದ ಬಗೆ– | ಅತ್ಯಂತ ಸರಳ ಮತ್ತು ಅತ್ಯಂತ ಪ್ರಬಲ | 13 | 12 |
| 146. | ಮಾಯವಾದದ ಶ್ರೇಷ್ಠ ಪಂಡಿತರಾಗಿದ್ದ ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಅವರ ತಂದೆ ನೀಡಿದ ಸಂದೇಶವೇನು? | ಮಾಯಾವಾದದ ನಿರ್ಗುಣ ಉಪಾಸನೆ ಸರಿ ಇಲ್ಲ | 52 | 13 |
| 147. | ರಾತ್ರಿಯ ಹೊತ್ತು ಯಾರಿಗೂ ತಿಳಿಯದೆ ಮಧ್ವಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡಿದ ತ್ರಿವಿಕ್ರಮಪಂಡಿತರಿಗೆ ಅನಿಸಿದ್ದೇನು? | ಮಧ್ವರ ಸಿದ್ಧಾಂತವೇ ಸರಿಯಾದ ಸಿದ್ಧಾಂತ | 67 | 13 |
| 148. | 12 ವರ್ಷಗಳ ಕಾಲ ಉಪವಾಸ ಮಾಡಿದರೆ ಬರುವ ಫಲ ಇದರಿಂದ ಬರುತ್ತದೆ– | ವಿಷ್ಣುಪಾದೋದಕ ಪ್ರಾಶನದಿಂದ | 29 | 14 |
| 149. | ಲಿಕುಚ ಕುಲದವರಲ್ಲಿದ್ದ ವಿಶೇಷವಾದ ಒಂದು ದೀಕ್ಷೆ ಯಾವುದು? | ಯಾವ ಕಾರಣಕ್ಕೂ ಮಧ್ವಾಚಾರ್ಯರ ಆದೇಶವನ್ನು ಮೀರಬಾರದು | 136 | 15 |
| 150. | ಎಲ್ಲಾ ಮಧ್ವ ಶಿಷ್ಯರಲ್ಲಿ ಕಾಣಿಸಿರುವ ಸಮಾನವಾದ ಚಿಹ್ನೆ ಯಾವುದು? | ಶಂಖ ಚಕ್ರಾದಿ ವೈಷ್ಣವ ಚಿಹ್ನೆ | 14 | 12 |

## ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ –2024–2025

## ಶಿವಸ್ತುತಿ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ |
|---|---|---|---|
| 1. | ರುದ್ರನ ಕಾಂತಿ ಹೇಗಿದೆ? | ಶುದ್ಧವಾದ ಸ್ಫಟಿಕಮಣಿಯಂತಿದೆ. | 1 |
| 2. | ರುದ್ರನ ಜಟೆ ಹೇಗಿದೆ? | ಬೆಂಕಿಗೆ ಹಾಕಿ ತೆಗೆದ ಬಂಗಾರದ ಕಾಂತಿಯನ್ನು ಹೊಂದಿದ ಜಟೆ. | 1 |
| 3. | ಶಿವನು ಜಟೆಯಲ್ಲಿ ಏನನ್ನು ಇಟ್ಟು ಕೊಂಡಿದ್ದಾನೆ? | ಬಿದಿಗೆ ಚಂದ್ರನನ್ನು. | 1 |
| 4. | ಶಿವನು ಯಾವ ಚರ್ಮವನ್ನು ಧರಿಸಿದ್ದಾನೆ? | ಹುಲಿಯ ಚರ್ಮವನ್ನು. (ಆನೆಯ ಚರ್ಮ) | 1 |
| 5. | ಶಿವನು ಯಾವುದನ್ನು ಆಭರಣವನ್ನಾಗಿಸಿಕೊಂಡಿದ್ದಾನೆ? | ಸರ್ಪಗಳನ್ನು | 1 |
| 6. | ಶಿವನು ದೇಹವಿಡೀ ಏನನ್ನು ಬಳಿದುಕೊಂಡಿದ್ದಾನೆ? | ಬೂದಿಯನ್ನು. | 1 |
| 7. | ಹುಲಿಯ ಚರ್ಮದ ವಸ್ತ್ರ, ಸರ್ಪವೇ ಆಭರಣ, ಮೈಯೆಲ್ಲಾ ಬೂದಿ– ಇದರ ಸಂಕೇತ? | ವೈರಾಗ್ಯ. | 1 |
| 8. | ಮುಖ್ಯವಾಗಿ ಯಾರಿಗೆಲ್ಲಾ 3 ಕಣ್ಣುಗಳಿವೆ? | ನರಸಿಂಹ, ದುರ್ಗೆ, ಶಿವದೇವರು. | 2 |
| 9. | ಸ್ಮರ ಯಾರು? | ಮನ್ಮಥ | 2 |
| 10. | ಶಿವನು ಪಾರ್ವತೀದೇವಿಯ ರೂಪಕ್ಕೆ ವಶನಾಗಿ ಮದುವೆಯಾದನೇ? | ಇಲ್ಲ. ಪಾರ್ವತೀದೇವಿಯ ಭಕ್ತಿಗೆ ವಶನಾದ. | 2 |
| 11. | ದಕ್ಷನ ಮಗಳಾದ ದಾಕ್ಷಾಯಿನಿ ದೇಹ ತೊರೆದ ಮೇಲೆ ಯಾರ ಮಗಳಾಗಿ ಅವತರಿಸಿದಳು? | ಹಿಮವಂತನ. | 2 |
| 12. | ದಕ್ಷನ ಯಜ್ಞದಲ್ಲಿ ಮಗಳಾದ ಸತಿಯು ಯಾಕೆ ದೇಹ ತೊರೆದಳು? | ತನ್ನ ಗಂಡನಿಗೆ ಕೊಡಬೇಕಾದ ಮರ್ಯಾದೆ ಕೊಡದೇ ಇರುವುದಕ್ಕಾಗಿ. | 2 |
| 13. | ಶಿವನಿಗೆ ಎಷ್ಟು ಮುಖಗಳು? ಅವು ಯಾವುವು? | 5 ಮುಖಗಳು. ಮಹೇಶ (ಈಶಾನ), ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ. | 3 |
| 14. | ಶಿವನ 'ಮಹೇಶ' ಮುಖದ ವಿವರ. | ಇಂದ್ರಾದಿದೇವತೆಗಳಿಂದಲೂ ಪೂಜ್ಯನು, ಉಳಿದ 4 ಮುಖಗಳ ಮೇಲೆ ಇರುವುದು. | 3 |
| 15. | ಶಿವನ ತತ್ಪುರುಷ ಮುಖದ ವಿವರ. | ಇಂದ್ರಾದಿ ಸಕಲ ಜೀವಿಗಳಿಗಿಂತ ಶ್ರೇಷ್ಠನು, ಪೂರ್ವದಿಕ್ಕಿಗಿರುವ ಪ್ರಶಾಂತ ರೂಪ. | 3 |
| 16. | ಶಿವನ ಅಘೋರ ಮುಖದ ವಿವರ. | ಶತ್ರುಗಳಿಗೆ ಭಯಂಕರನು, ದಕ್ಷಿಣ ದಿಕ್ಕಿಗಿರುವ ಮುಖ. | 3 |
| 17. | ಶಿವನ ವಾಮದೇವ ಮುಖದ ವಿವರ. | ಮಂಗಲಗುಣಪೂರ್ಣನು, ಉತ್ತರ ದಿಕ್ಕಿಗಿರುವ ಮುಖ. | 3 |
| 18. | ಶಿವನ ಸದ್ಯೋಜಾತ ಮುಖದ ವಿವರ | ಧ್ಯಾನ ಮಾಡುವವರಿಗೆ ಕೂಡಲೆ ಪ್ರಕಟವಾಗುವ ರೂಪ. ಪಶ್ಚಿಮ ದಿಕ್ಕು. | 3 |
| 19. | ಶಿವನು ಮನಸ್ಸಿನ ಯಾವ 5 ವೃತ್ತಿಗಳನ್ನು ವಿಸ್ತರಿಸಲು ಅನುಗ್ರಹ ಮಾಡುವನು? | ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ– ವಿಸ್ತಾರವಾದರೆ ಆತ್ಮಸಾಕ್ಷಾತ್ಕಾರವಾಗಿ ಸಮಸ್ತ ಜಗತ್ತಿನ ಸಜ್ಜನರ ಒಳಿತನ್ನು ಬಯಸುವೆವು. | 3 |
| 20. | ಯಾವ 5 ಅಜ್ಞಾನದ ವೃತ್ತಿಗಳನ್ನು (ಮನಸ್ಸಿನ ಕತ್ತಲೆಯನ್ನು) ಹೊಡೆದೋಡಿಸಲು ಶಿವನ ಅನುಗ್ರಹ ಬೇಕು? | ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ– ಅಜ್ಞಾನ, ಮಿಥ್ಯಾಜ್ಞಾನದಿಂದ ಹೊರಬರಲು ಶಿವನ ಅನುಗ್ರಹ ಬೇಕು. | 3 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|

| | | | |
|---|---|---|---|
| 21. | ಶಿವನಿಗೆ ಅಷ್ಟಮೂರ್ತಿಧರ ಎಂದು ಏಕೆ ಕರೆಯುವರು? | ಶಿವನ ಎಂಟು ರೂಪಗಳು ಭೂಮಿ–ಜಲ–ಅಗ್ನಿ–ವಾಯು–ಆಕಾಶ–ಸೂರ್ಯ–ಚಂದ್ರ–ಸಾಧಕ (ಸಾಧನೆ ಮಾಡುವ ಭಕ್ತ) ರಲ್ಲಿ ನೆಲೆನಿಂತಿವೆ. ಹಾಗಾಗಿ ಈ ಹೆಸರು. | 4 |
| 22. | ಅಹಂಕಾರದ ಅಭಿಮಾನಿದೇವತೆ ಯಾರು? | ಶಿವ, ನಾನು ಭಗವಂತನ ಪ್ರತಿಬಿಂಬ ಎಂಬ ಅರಿವು ಬೇಕು. 'ನಾನೇ' ಎಂಬ ಅಹಂಕಾರ ಇರದಂತೆ ಶಿವನಲ್ಲಿ ಪ್ರಾರ್ಥಿಸಬೇಕು. | 4 |
| 23. | ಶಿವನ ಕೈಯಲ್ಲಿರುವ ಕೆಲವು ಭೂಷಣಾಯುಧಗಳನ್ನು ತಿಳಿಸಿ. | ಕೊಡಲಿ, ತ್ರಿಶೂಲ, ಡಮರುಗ, ಹೊಳೆವ ಜಿಂಕೆ, ಖಟ್ವಾಂಗ. | 6 |
| 24. | ಬೇಡಿದ ಭಕ್ತರಿಗೆ ಶಿವ ಹೇಗೆ ಅನುಗ್ರಹಿಸುತ್ತಾನೆ? | ಕಲ್ಪವೃಕ್ಷದಂತಿದ್ದು ಯಥಾರ್ಥಜ್ಞಾನವನ್ನು ನೀಡುವನು. | |
| 25. | ನಮ್ಮ ಬೇಡಿಕೆ ಹೇಗಿದ್ದರೆ ಶಿವ ಸಂತೋಷಪಡುವನು? | ತೈಲಧಾರೆಯಂತೆ ಹರಿಯಲ್ಲಿ ಭಕ್ತಿ ಕೊಡಿ ಎಂದು ಬೇಡಿದಾಗ ಶಿವನಿಗೆ ಸಂತೋಷವಾಗುವುದು. | |
| 26. | ಸಹಸ್ರನಯನಃ, ಗುಹಃ, ಸಹಸ್ರರಶ್ಮಿಃ, ವಿಧುಃ, ಅಪ್ಪತಿಃ ಯಾರು? | ಇಂದ್ರ, ಕಾಮ, ಸೂರ್ಯ, ಚಂದ್ರ, ವರುಣ ದೇವತೆಗಳು. | 8 |
| 27. | ಶಿವನ ಪ್ರಾಣಪ್ರಿಯನು ಯಾರು? ಯಾರ ಧ್ಯಾನ ಶಿವ ಸದಾ ಮಾಡುವನು? | ರಮಾಪತಿಯಾದ ನಾರಾಯಣ. | 9 |
| 28. | ಮಂದಮತಿಗಳು ಹರಿಹರರ ಸಂಬಂಧವನ್ನು ಹೇಗೆ ನೋಡುವರು? | ತಮ್ಮವ ಬೇರೆಯವರಂತೆ ಹರಿಹರರನ್ನು ಮಂದಮತಿಗಳು ಕಾಣುವರು. | 9 |
| 28. | 'ಶಿವ–ಶಿವ' ಎಂಬ ನಾಮವನ್ನು ಜಪಿಸಿದರೆ ಏನಾಗುತ್ತದೆ? | 'ಶಿವ–ಶಿವ' ಎಂಬ ನಾಮವನ್ನು ಜಪಿಸುವವರ ಪಾಪವು ಭಸ್ಮವಾಗದೇ ಇರದು. | 10 |
| 29. | 'ಅಕಿಂಚನಃ' ಎಂದರೇನು? | ವೈರಾಗ್ಯಶಾಲಿ ಎಂದರ್ಥ. | 10 |
| 30. | ಅತ್ರಿಯ ಕಣ್ಣಿಂದ ಜನಿಸಿದವ ಯಾರು? | ಚಂದ್ರ. | 11 |
| 31. | ಸ್ಮಶಾನ ಏಕೆ ರುದ್ರಭೂಮಿ ಎನಿಸಿತು? | ರುದ್ರನನ್ನು ಅವಲಂಬಿಸಿದ ಭೂತಗಣಗಳು ಸ್ಮಶಾನದಲ್ಲಿಯೇ ಸಂತೋಷದಿಂದಿರುತ್ತಾರೆ. ಹಾಗೆಯೇ ರುದ್ರದೇವರ ತಪಸ್ಸಿಗೆ ಅತ್ಯಂತ ಪ್ರಶಸ್ತವಾದ ಸ್ಥಳ ಈ ಸ್ಮಶಾನ. ಹೀಗೆ ರುದ್ರನ ಗಣಗಳಿಗೆ ಹಾಗೂ ರುದ್ರನ ತಪಸ್ಸಿಗೆ ಆಶ್ರಯವಾದ ಸ್ಮಶಾನವನ್ನು ರುದ್ರಭೂಮಿ ಎಂದು ಕರೆಯುತ್ತಾರೆ | 11 |
| 32. | ಶಿವನ ಬಳಿ ನಮ್ಮ ಪ್ರಾರ್ಥನೆ ಹೇಗಿರಬೇಕು? | ನಮ್ಮ ಅಮಂಗಲವನ್ನು ಸುಟ್ಟು, ನಮ್ಮ ಒಳಗಿರುವ ಭಗವಂತನನ್ನು (ನಾರಾಯಣನನ್ನು) ಕಾಣುವ ಒಳಜ್ಞಾನವನ್ನು ನೀಡು. | 12 |
| 33. | ಶಿವಸ್ತುತಿ ಪಾರಾಯಣದ ಫಲವೇನು? | ಶಿವನ ಕರುಣೆಯ ಚಿಗುರೊಡೆಯುವುದೇ ಈ ಸ್ತುತಿಯ ಫಲವು. | 13 |
| 34. | ಪಂಚಭೂತಗಳು ಯಾವುವು? | ಆಕಾಶ, ಮಣ್ಣು, ನೀರು, ವಾಯು (ಗಾಳಿ), ಬೆಂಕಿ. | 3 |
| 35. | ಪಂಚ ತನ್ಮಾತ್ರೆಗಳು ಯಾವುವು? | ಶಬ್ದ, ರೂಪ, ರಸ, ಗಂಧ, ಸ್ಪರ್ಶ. | 3 |
| 36. | ಪಂಚ ಜ್ಞಾನೇಂದ್ರಿಯಗಳು ಯಾವುವು? | ಕಿವಿ, ಕಣ್ಣು, ನಾಲಿಗೆ,ಮೂಗು, ಚರ್ಮ. | 3 |
| 37. | ಪಂಚ ಕರ್ಮೇಂದ್ರಿಯಗಳು ಯಾವುವು? | ವಾಕ್, ಪಾಣಿ, ಪಾದ, ಪಾಯು, ಉಪಸ್ಥ. | 3 |
| 38. | ಪಂಚ ಪ್ರಾಣಗಳು ಯಾವುವು? | ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ. | 3 |
| 39. | ಭಕ್ತನಾದ ಉಮೇಶ(ಶಿವ) ಹಾಗೂ ಸರ್ವೋತ್ತಮನಾದ ರಮೇಶ(ನಾರಾಯಣ)ರ ಸಂಬಂಧವನ್ನು ಸರಿಯಾಗಿ ತಿಳಿಯದಿದ್ದರೆ ಏನಾಗುತ್ತದೆ? | ಉಮೇಶ ರಮೇಶರ ಸಂಬಂಧವನ್ನು ಸರಿಯಾಗಿ ತಿಳಿಯದೆ ವಂಚಕಮನಸ್ಸುಳ್ಳ ಜನರು ದುಃಖಿತಪ್ತರಾಗಿ ತೊಳಲಾಡುವರು. | 9 |
| 40. | ಶ್ರೀನಾರಾಯಣ ಪಂಡಿತಾಚಾರ್ಯರಿಂದ ರಚಿತವಾದ ಶಿವಸ್ತುತಿ ಯಾವ ಭ್ರಾಂತಿಯನ್ನು ಹೋಗಲಾಡಿಸುತ್ತದೆ? | ವೈಷ್ಣವರು ಶಿವನಲ್ಲಿ ಮಾಡುವ ಭಕ್ತಿ, ವೈಷ್ಣವರಿಗೆ ಶಿವನು ಕೊಡುವ ಅನುಗ್ರಹ ಎಲ್ಲವನ್ನೂ ನಾರಾಯಣ ಪಂಡಿತಾಚಾರ್ಯರು ಚೆನ್ನಾಗಿ ವರ್ಣಿಸಿ ವೈಷ್ಣವರು ಶಿವದ್ವೇಷಿಗಳಲ್ಲ ಎಂಬ ಭ್ರಾಂತಿಯನ್ನು ಹೋಗಲಾಡಿಸಿದರು. | 9 |

ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ –2024–25

ಯೋಗದೀಪಿಕಾ

| | ಪ್ರಶ್ನೆ | ಉತ್ತರ | |
|---|---|---|---|
| 1. | 'ಯೋಗದೀಪಿಕಾ' ಗ್ರಂಥದ ಕರ್ತೃಗಳು ಯಾರು? | ಶ್ರೀ ನಾರಾಯಣ ಪಂಡಿತಾಚಾರ್ಯರು. | |
| 2. | 'ಪೂರ್ಣಪ್ರಸಾದಕೃತ್' ಎಂದರೆ ಯಾರು? | ಮಹಾವಿಷ್ಣು. | |
| 3. | ಜ್ಞಾನ–ವಿಘ್ನೋಪಶಮನಕ್ಕಾಗಿ ಯಾರನ್ನು ಆರಾಧಿಸಬೇಕು? | ಜ್ಞಾನವಿಘ್ನೋಪಶಮನಕ್ಕಾಗಿ ನರಸಿಂಹ–ವೇದವ್ಯಾಸ–ಕೃಷ್ಣಾದಿರೂಪಗಳನ್ನು ಆರಾಧಿಸಬೇಕು. | |
| 4. | 'ಆತ್ಮದೀಪ' ಎಂದರೆ ಯಾರು? | ಭಗವನ್ಮಹಿಮಾಬೋಧಕರಾದ ಗುರುಗಳು. | |
| 5. | ಸದಾಚಾರ ನಿಷ್ಠೆಯುಳ್ಳವನು ಬೆಳಿಗ್ಗೆ ಯಾವ ಕಾಲದಲ್ಲಿ ಏಳಬೇಕು? | ಬ್ರಾಹ್ಮ ಮುಹೂರ್ತದಲ್ಲಿ ಏಳಬೇಕು. | |
| 6. | ಶೌಚಾಚಾರವನ್ನು ಯಾವ ದಿಕ್ಕಿಗೆ ಅಭಿಮುಖವಾಗಿ ಮಾಡಬೇಕು? | ಹಗಲಿನಲ್ಲಿ ಉತ್ತರಾಭಿಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿಯೂ ನಡೆಸಬೇಕು. | |
| 7. | 'ಪ್ರಾಪಣ' ಎಂದರೇನು? | ದೇವರಿಗೆ ನಿವೇದಿಸಲು ಯೋಗ್ಯವಾದ ವಸ್ತು. (ಗುರುಗಳ ಭಿಕ್ಷೆಗೆ ಸಿದ್ಧವಾದ ಶ್ರೀಹರಿಯ ನೈವೇದ್ಯ.) | |
| 8. | ಪೂಜಾಕಾಲದಲ್ಲಿ ಸಂಭವಿಸಬಹುದಾದ 'ದ್ವಾತ್ರಿಂಶದಪರಾಧ'ಗಳನ್ನು ಯಾರು–ಯಾರಿಗೆ ಹೇಳಿದರು? | ವರಾಹರೂಪನಾದ ಮಹಾವಿಷ್ಣುವು ಭೂದೇವಿಗೆ ಹೇಳಿದನು. | |
| 9. | ಅಷ್ಟವಿಧ ಪುಷ್ಪಗಳು ಯಾವುವು? | ಮಾನವನು ತನ್ನ ಜೀವನಯಜ್ಞದಲ್ಲಿ ಭಗವಂತನಿಗೆ ಅರ್ಪಿಸಬೇಕಾದ ಎಂಟು ವಿಧವಾದ ಪುಷ್ಪಗಳು ಇಂತಿವೆ– ಅಹಿಂಸೆ, ಇಂದ್ರಿಯನಿಗ್ರಹ, ಭೂತದಯೆ (ಪ್ರಾಣಿಗಳ ಮೇಲಿನ ಅನುಕಂಪೆ), ಕ್ಷಮೆ (ಸಹನೆ), ಜ್ಞಾನಸಾಧನೆ, ತಪಸ್ಸು, ಧ್ಯಾನ, ಸತ್ಯ, ಇವುಗಳನ್ನು ದೇವರಿಗೆ ಅರ್ಪಿಸಿದರೆ ದೇವರು ಪ್ರಸನ್ನನಾಗುವನು. | |
| 10. | ಶ್ರೀದೇವರ ನೈವೇದ್ಯವನ್ನುಣ್ಣುವಾಗ ಅನುಸಂಧಾನ ಏನಿರಬೇಕು? | 'ಶ್ರೀದೇವರು ಪ್ರೀತನಾಗಲಿ' ಎಂದಿರಬೇಕು. | |
| 11. | 'ಅಕ್ಷರಪುರುಷ' ಎಂದರೆ ಯಾರು? | ಆಕಾಶದಂತೆ ನಿರ್ವಿಕಾರಳಾದ ಮಹಾಲಕ್ಷ್ಮೀದೇವಿ. | |
| 12. | ಲೋಕದಲ್ಲಿಯೂ–ವೇದದಲ್ಲಿಯೂ ಪುರುಷೋತ್ತಮನೆಂದು ಯಾರು ಪ್ರಸಿದ್ಧನಾಗಿರುವನು? | ಶ್ರೀಹರಿಯು. | |
| 13. | ಇಂದ್ರಾದಿದೇವತೆಗಳು ಯಾರನ್ನು ಆಶ್ರಯಿಸಿರುವರು? | ರುದ್ರದೇವನನ್ನು ಆಶ್ರಯಿಸಿರುವರು. | |
| 14. | ರುದ್ರದೇವರು ಯಾರನ್ನು ಆಶ್ರಯಿಸಿರುವರು? | ಚತುರ್ಮುಖ ಬ್ರಹ್ಮನನ್ನು ಆಶ್ರಯಿಸಿರುವರು. | |
| 15. | ಚತುರ್ಮುಖಬ್ರಹ್ಮನು ಯಾರ ಅಧೀನದಲ್ಲಿ ಇರುವನು? | ಶ್ರೀಹರಿಯ ಅಧೀನದಲ್ಲಿ ಇರುವನು. | |
| 16. | ಎಲ್ಲಾ ವಿಧಿ–ನಿಷೇಧಗಳು ಯಾವುದರ ದಾಸರೆನಿಸಿಕೊಳ್ಳುವವು? | ಸದಾಕಾಲ ವಿಷ್ಣುವನ್ನು ಸ್ಮರಿಸಬೇಕು. ಎಂದಿಗೂ ವಿಷ್ಣುವನ್ನು ಮರೆಯಬಾರದು. ಈ ಎರಡು ನಿಯಮಗಳ ದಾಸರೆನಿಸಿಕೊಳ್ಳುವವು. | |
| 17. | ವಿಷ್ಣುಭಕ್ತಿ ಇಲ್ಲದವನ ಧರ್ಮಾಚರಣೆ ಏನಾಗುವುದು? | ಪಾಪಕರ್ಮವಾಗುವುದು. | |
| 18. | ವಟುವಿಗೆ ಯಾವುದರಲ್ಲಿ ಅಧಿಕಾರವಿಲ್ಲ? | ವೈಶ್ವದೇವ, ಬಲಿಹರಣ(ದಾನ), ದಂತಧಾವನದಲ್ಲಿ ಅಧಿಕಾರವಿಲ್ಲ. | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 19. | ಎಲ್ಲಾ ವರ್ಣಾಶ್ರಮದವರಿಗೂ ಸಾಮಾನ್ಯವಾದ ಪೂಜಾಚಿಂತನೆ ಯಾವುದು? | ಪ್ರಧಾನವಾಗಿ ಎಲ್ಲಾ ಕಡೆಯೂ ಶ್ರೀವಿಷ್ಣುವೇ ಪೂಜಿಸಲ್ಪಡುವವನು. ರಮೆ–ಬ್ರಹ್ಮನೇ ಮೊದಲಾದವರು ಭಗವಂತನ ಪರಿವಾರವಾಗಿಯೇ ಪೂಜಿಸಲ್ಪಡುವವರು. ಪ್ರಧಾನರಾಗಿ ಅಲ್ಲ. | | |
| 20. | ದಶಮಿಯಂದು ಯಾವೆಲ್ಲಾ ಭೋಗಗಳನ್ನು ಬಿಡಬೇಕು? | ಅಂಜನ, ಅಭ್ಯಂಜನ, ಮಧುರ–ಕಟು–ಲವಣಾತಿಶಯ ಪದಾರ್ಥಾದಿಗಳನ್ನು ಬಿಡಬೇಕು. ಎರಡು ಹೊತ್ತಿನ ಊಟವನ್ನು ಬಿಡಬೇಕು. | | |
| 21. | ಏಕಾದಶಿಯಂದು ಎಷ್ಟು ಬಾರಿ ಸ್ನಾನ ಮಾಡಬೇಕು? | ಮೂರು ಬಾರಿ (ಸಂಧ್ಯಾಕಾಲದಲ್ಲಿ). ಅವಗಾಹನ ವಿಧಿಯಂತೆ. | | |
| 22. | ಏಕಾದಶಿಯಂದು ಮಾಡಬೇಕಾದ ಕರ್ಮಗಳು ಯಾವುವು? | ಪ್ರಾತಃಕಾಲದಲ್ಲಿ ಹರಿಯ ಸ್ಮರಣೆಯೊಂದಿಗೆ ಎದ್ದು, ಉಪವಾಸದ ಸಂಕಲ್ಪಾದಿಗಳನ್ನು ಮಾಡಿ, ಮಂತ್ರಜಪಾದಿಗಳನ್ನು–ದೇವಪೂಜಾದಿಗಳನ್ನು ನಡೆಸಿ, ಮೂರು ಸಂಧ್ಯೆಯಲ್ಲೂ ಸ್ನಾನಗೈದು, ವೇದಪಾರಾಯಣ, ಶಾಸ್ತ್ರಶ್ರವಣ, ಶಾಸ್ತ್ರಪ್ರವಚನ, ರಾತ್ರಿಕಾಲದಲ್ಲಿ ಜಾಗರಣ, ಹರಿಭಕ್ತರೊಡನೆ ಕಾಲಯಾಪನೆ, ದೇವರ ಮುಂಭಾಗದಲ್ಲಿ ನೃತ್ಯ–ಗೀತಾದಿಗಳ ಸಮರ್ಪಣೆ ಇವಿಷ್ಟು ಮಾಡಬೇಕಾದ ಕರ್ಮಗಳು. | | |
| 23. | ಭಗವಂತನ ಆರಾಧನೆಗೆ ಅತಿ ಹೆಚ್ಚು ಪ್ರಶಸ್ತ ಮಾಸಗಳು ಯಾವುವು? | ಕಾರ್ತಿಕ–ಶ್ರಾವಣ–ಮಾಘ. | | |
| 24. | ಅಗ್ನಿಗೆ ನಡೆಸುವ ಸಂಸ್ಕಾರಗಳೆಷ್ಟು? | 16 | | |
| 25. | ಭಗವಂತನಿಗೆ ಯಾವ ಯಜ್ಞೋಪವೀತವನ್ನು ಅರ್ಪಿಸಬೇಕು? | ಬಂಗಾರದಿಂದ ಮಾಡಲ್ಪಟ್ಟ ಉಪವೀತವನ್ನು. | | |
| 26. | ಕಲಶಾರಾಧನೆಯ ಅಂಗವಾಗಿ ನಡೆಯುವ ಪೂಜೆಯಲ್ಲಿ ಪುಷ್ಪಾರ್ಪಣೆಯನ್ನು ಎಷ್ಟು ಬಾರಿ ನಡೆಸಬೇಕು? | 108 ಕ್ಕೆ ಕಡಿಮೆಯಾಗದಂತೆ ನಡೆಸಬೇಕು. | | |
| 27. | ಪೂಜಾಂತ್ಯದಲ್ಲಿ ಎಷ್ಟು ಬಾರಿ ದೇವರನ್ನು ನಮಿಸಬೇಕು? | 18 ಕ್ಕಿಂತ ಕಡಿಮೆಯಾಗದಂತೆ ನಮಿಸಬೇಕು. | | |
| 28. | ಭಗವಂತನು ಯಾವಾಗ ಪ್ರಸನ್ನನಾಗುವನು? | ಮಾನುಷೇಂದ್ರಿಯಭೋಗ್ಯವಾದುದನ್ನು ಪರಮಾತ್ಮನು ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ಸ್ವೀಕರಿಸುವನು ಎಂಬ ಭಾವನೆಯಿಂದ ಅರ್ಪಿಸಿದಾಗ ಪ್ರಸನ್ನನಾಗುವನು. | | |
| 29. | ಎಂತಹ ಪೂಜೆಯಿಂದ ದೇವರು ಅನುಗ್ರಹಿಸುವನು? | ಸುಲಭವಾಗಿ ದೊರೆಯುವ ದ್ರವ್ಯಗಳಿಂದ ನಡೆಸುವ ಪೂಜೆಗೆ. | | |
| 30. | ಬ್ರಹ್ಮಚಾರಿಯ ನಿಯಮಗಳೇನು? | ಉಪನಯನ ಸಂಸ್ಕಾರವುಳ್ಳವನಾಗಿ, ಗುರುಶುಶ್ರೂಷಾಪರನಾಗಿ ಶುದ್ಧವಾದ ನಡವಳಿಕೆಯಿಂದ ನಿತ್ಯಾನುಷ್ಠಾನ ತತ್ಪರನಾಗಿ ಎರಡು ಹೊತ್ತು ಅಗ್ನಿಕಾರ್ಯವನ್ನು ನಡೆಸುತ್ತಾ ಭಿಕ್ಷಾಚರ್ಯೆಯನ್ನು ನಡೆಸಿ, ವೇದಾಧ್ಯಯನವನ್ನು ಕೈಗೊಳ್ಳಬೇಕು | | |
| 31. | ಯಾರಿಗೆ ವೇದಾಂತವಿದ್ಯಾ ಪ್ರಾಪ್ತಿಯಾಗುವುದು? ಬ್ರಹ್ಮಚಾರಿಯ ನಿಯಮಗಳೇನು? | ಪರಮಾತ್ಮನಲ್ಲಿ ಸ್ವಾಭಾವಿಕವಾದ ಭಕ್ತಿಯುಳ್ಳವನಾಗಿದ್ದು, ಬ್ರಾಹ್ಮಣಕುಲದಲ್ಲಿ ಹುಟ್ಟಿ, ಪಾಪರಹಿತನಾಗಿ, ಶಬ್ದ–ನ್ಯಾಯಾದಿ ಶಾಸ್ತ್ರಗಳನ್ನು ತಿಳಿದ, ವೇದಾಧ್ಯಯನ ಸಂಪನ್ನನಾದ, ತಪಸ್ವಿಯಾದ, ವ್ರತನಿಷ್ಠೆಯುಳ್ಳ ಸದಾಚಾರ ಸಂಪನ್ನನಿಗೆ ಗುರುಗಳ ಪ್ರಸಾದದಿಂದ ಬ್ರಹ್ಮವಿದ್ಯೆ (ವೇದಾಂತವಿದ್ಯೆ) ಪ್ರಾಪ್ತಿಯಾಗುವುದು. | | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|

| | | | |
|---|---|---|---|
| 32. | ವಿಷ್ಣುಭಕ್ತನೆನಿಸಿಕೊಳ್ಳಬೇಕಾದರೆ (ಭಗವದುಪಾಸಕನಾಗಬೇಕಾದರೆ) ಅಳವಡಿಸಿಕೊಳ್ಳಲೇ ಬೇಕಾದ ಗುಣಗಳು ಯಾವುವು? | ಅಹಿಂಸೆ, ಸತ್ಯ, ಕಳ್ಳತನ ಮಾಡದಿರುವುದು, ಬ್ರಹ್ಮಚರ್ಯ, ದೈಹಿಕ ಮತ್ತು ಮಾನಸಿಕ ಶುದ್ಧಿ, ದೇವರನ್ನು ಅನುಗಾಲವೂ ಸ್ಮರಿಸುತ್ತಾ ಕಠಿಣವ್ರತಗಳನ್ನು ಆಚರಿಸುವುದು, ದೊರಕಿದ ವಸ್ತುಗಳಲ್ಲಿ ಸಂತೃಪ್ತಿ, ನಿರಂತರ ಅಧ್ಯಯನ, ದೇವರ ಆರಾಧನೆ, ವರ್ಣಾಶ್ರಮ ನಿಯಮಗಳನ್ನು ಪಾಲಿಸುವುದು, ಮತ್ತೆ ಮತ್ತೆ ವೇದಾದಿ ಸಚ್ಛಾಸ್ತ್ರಗಳ ಆವರ್ತನೆ, ಸಹಾಧ್ಯಾಯಿಗಳೊಂದಿಗೆ ಶಾಸ್ತ್ರಗಳ ಸಾರವನ್ನು ಮತ್ತೆ ಮತ್ತೆ ಚರ್ಚಿಸಿ ದೃಢಪಡಿಸಿಕೊಳ್ಳುವುದು | |
| 33. | . ಪೂರ್ಣ ಸುಖವನ್ನು ಹೊಂದುವವರು ಯಾರು? | ಭಗವದ್ಭಕ್ತರಾದ ಸಜ್ಜನರಲ್ಲಿ, ತತ್ತ್ವದೇವತೆಗಳಲ್ಲಿ, ಸರಸ್ವತೀ ದೇವಿಯಲ್ಲಿ, ಮಧ್ವರಾಯರಲ್ಲಿ, ಲಕ್ಷ್ಮೀದೇವಿಯಲ್ಲಿ, ಶ್ರೀನಾರಾಯಣನಲ್ಲಿ ಅನುಕ್ರಮವಾಗಿ ತಾರತಮ್ಯವನ್ನು ತಿಳಿದು ಭಕ್ತಿ ಮಾಡುವ ಭಕ್ತರೇ ಪೂರ್ಣ ಸುಖವನ್ನು ಹೊಂದುವರು. | |
| 34. | ಪ್ರಾತಃಕಾಲದಲ್ಲಿ ಏಳುವಾಗಲೇ ಮಾಡಬೇಕಾದ ಚಿಂತನೆ ಯಾವುದು? | ಹೇ ಸ್ವಾಮಿಯೇ! ಅನುಗಾಲವೂ ನಿನ್ನ ಸೇವಕನು ನಾನಾಗಿರುವೆನು. ನೀ ಮೆಚ್ಚುವ ಯಾವ ಕಾರ್ಯವನ್ನು ನಾನು ಮಾಡುವವನಾಗುವೆನು? (ಸಂಸಾರದ ಪ್ರಭಾವದಿಂದ ವರ್ಣಾಶ್ರಮಕರ್ಮವನ್ನು ಆಚರಿಸುವಲ್ಲಿ ಉಂಟಾಗುವ ತೊಡಕುಗಳನ್ನು ಪರಿಹರಿಸು ಎಂಬ ಭಾವದಿಂದ ಪ್ರಾರ್ಥಿಸುವುದು) ನಿನಗೆ ಪ್ರಿಯವಲ್ಲದ ದಾರಿಯಲ್ಲಿ ಸಾಗುವ ಮನವು ಎಂದಿಗೂ ನನಗೆ ಬಾರದಿರಲಿ. ದೈಹಿಕ–ವಾಚಿಕ–ಮಾನಸಿಕ ಕರ್ಮಗಳಲ್ಲಿ ಅಧರ್ಮ ನುಸುಳದಿರಲಿ ಎಂದು ಶ್ರೀಹರಿಯನ್ನು ಪ್ರಾರ್ಥಿಸಿ ಸದಾಕಾಲ ಕರ್ಮಾನುಷ್ಠಾನ ಮಾಡುತ್ತಿರಬೇಕು. | |
| 35. | ಶರೀರಶೋಧನೆಯ ಮುಖ್ಯ ಪ್ರಯೋಜನವೇನು? | ಭಗವಂತನ ಸಾನ್ನಿಧ್ಯ ಸಿದ್ಧಿ. | |
| 36. | ಶೌಚಾಚಾರಕ್ಕೆ ಪ್ರಶಸ್ತವಾದ ಸ್ಥಳ ಯಾವುದು? | ನೈರ್ಋತ್ಯದಿಕ್ಕಿಗೆ ಸಾಗಿ, ಗೋವು–ಸೂರ್ಯ–ಬ್ರಾಹ್ಮಣಾದಿಗಳು ಮುಂಭಾಗಕ್ಕೆ ಇರದಿರುವಂತಹ ಸ್ಥಳವೇ ಪ್ರಶಸ್ತವಾಗಿದೆ. | |
| 37. | ಊರ್ಧ್ವಪುಂಡ್ರಗಳನ್ನು ಯಾವುದರಿಂದ ಧರಿಸಬೇಕು? | ಗೋಪೀಚಂದನ ಮೃತ್ತಿಕೆಯಿಂದ ಅಥವಾ ಕೇವಲ ನೀರಿನಿಂದಾದರೂ ಊರ್ಧ್ವಪುಂಡ್ರವನ್ನು ಧರಿಸಬೇಕು. | |
| 38. | ಊರ್ಧ್ವಪುಂಡ್ರಧಾರಣೆಯ ಸ್ಥಳಗಳನ್ನು ಹೆಸರಿಸಿ. | ಹಣೆ, ಹೊಟ್ಟೆ, ಹೃದಯ, ಕುತ್ತಿಗೆ, ಹೊಟ್ಟೆಯ ಬಲಬದಿ, ಬಲಭುಜ, ಬಲಕುತ್ತಿಗೆ, ಹೊಟ್ಟೆಯ ಎಡಬದಿ, ಎಡಭುಜ, ಎಡಕುತ್ತಿಗೆ, ಬೆನ್ನು, ಕುತ್ತಿಗೆಯ ಹಿಂಬದಿ ಮತ್ತು ನೆತ್ತಿಯಲ್ಲಿ ಎಲ್ಲಕ್ಕಿಂತ ಮೊದಲು ಮತ್ತು ಕೊನೆಯಲ್ಲಿ | |
| 39. | ಬಾಹುಮೂಲಗಳಲ್ಲಿ ಯಾವ ಯಾವ ಮುದ್ರೆಗಳನ್ನು ಧರಿಸಬೇಕು? | ಸುದರ್ಶನ ಚಕ್ರಮುದ್ರೆಯನ್ನು ಮತ್ತು ಪಾಂಚಜನ್ಯ ಶಂಖಮುದ್ರಯನ್ನು ತೋಳುಗಳ ಮೂಲದಲ್ಲಿ ಧರಿಸಬೇಕು. | |
| 40. | ಭಗವಂತನ ನಿರ್ಮಾಲ್ಯಧಾರಿ ಯಾರು? | ವಿಷ್ವಕ್ಸೇನ | |
| 41. | ಮಾನುಷೇಂದ್ರಿಯಭೋಗ್ಯವಸ್ತುವನ್ನು ದೇವರು ಹೇಗೆ ಸ್ವೀಕರಿಸುವನು? | ಕೇವಲ ದರ್ಶನದಿಂದಲೇ ಸ್ವೀಕರಿಸುವನು. | |
| 42. | ಯಾರಿಗೆ ಕರ್ಮಲೇಪ ಉಂಟಾಗುವುದಿಲ್ಲ? | ಮೂರು ಲೋಕಗಳಲ್ಲಿಯೂ (ಭಗವಂತನ ಮೂರು ಮನೆಗಳಲ್ಲಿಯ) ಭೋಜ್ಯವಾದ ಯಾವೆಲ್ಲಾ ವಸ್ತುಗಳಿವೆಯೋ, ಅವೆಲ್ಲವನ್ನು ತಿಳಿದುಕೊಂಡ, ಆ ವಸ್ತುಗಳೆಲ್ಲದರ ಸ್ವತಂತ್ರಭೋಕ್ತೃವಾದ ಪರಮಾತ್ಮನನ್ನು ತಿಳಿದುಕೊಂಡ ಸಾಧಕನಿಗೆ ಕರ್ಮಲೇಪ ಉಂಟಾಗುವುದಿಲ್ಲ. | |

| | | | |
|---|---|---|---|
| 43. | ಎಂತಹ ಭಕ್ತಿಯನ್ನು ಭಗವಂತನಲ್ಲಿ ಮಾಡಬೇಕು? | ದೇವಾನುದೇವತೆಗಳಿಂದ ಚಿಂತಿಸಲೂ ಸಾಧ್ಯವಾಗದ, ಅನ್ಯತ್ರ ವಿಚಲಿತವಾಗದ ಸುದೃಢಸ್ನೇಹರೂಪವಾದ ಭಕ್ತಿಯನ್ನು ಭಗವಂತನಲ್ಲಿ ಮಾಡಬೇಕು. | |
| 44. | ಭಕ್ತಿ–ಧರ್ಮ–ವ್ರತಾದಿಗಳನ್ನು ಯಾವ ವಯಸ್ಸಿನಲ್ಲಿ ಬೋಧಿಸಬೇಕು? | ಬಾಲ್ಯ ವಯಸ್ಸಿನಲ್ಲಿಯೇ ಬೋಧಿಸಬೇಕು. | |
| 45. | ಸಾಧಕನು ಭಗವದಾರಾಧನೆಯನ್ನು ಹೇಗೆ ನಡೆಸಬೇಕು? | ತನ್ನ ಆಶ್ರಮಕ್ಕೆ ಉಚಿತವಾದ ವೃತ್ತಿಯಿಂದಲೇ ಭಗವಂತನ ಆರಾಧನೆಯನ್ನು ಮಾಡಬೇಕು. ತನ್ನ ಆಶ್ರಮಾಚಾರಕ್ಕೆ ಉಚಿತವಲ್ಲದ ವೃತ್ತಿಯನ್ನು ಎಂದಿಗೂ ಆಶ್ರಯಿಸಕೂಡದು. ಅದು ಅನರ್ಥಕಾರಿ ಎನಿಸಿದೆ. | |
| 46. | ಹರಿಭಕ್ತನು ಆಚರಿಸಬೇಕಾದ ಧರ್ಮಗಳು ಯಾವುವು? | ಪ್ರಾಣಾಯಾಮದ ಸಾಧನೆ, ಅಯೋಗ್ಯರಿಂದ ಅಯೋಗ್ಯವಾದ ವಸ್ತುವನ್ನು ಸ್ವೀಕರಿಸದಿರುವುದು, ಪರರನ್ನು ಹಿಂಸಿಸದಿರುವುದು, ಸತ್ಯ ನುಡಿಯುವುದು, ಕಳ್ಳತನ ಮಾಡದಿರುವುದು, ನಿರಂತರ ದೇವರ ಕುರಿತು ಗಮನವಿರುವುದು, ಕಠಿಣವ್ರತಾಚರಣೆ ನಡೆಸುವುದು, ದೊರಕಿದರಲ್ಲಿ ತೃಪ್ತರಾಗಿರುವುದು, ನಿರಂತರ ದೇವರ ಆರಾಧನೆಯನ್ನು ನಡೆಸುವುದು–ಇವು ಧರ್ಮವೆನಿಸಿವೆ. | |
| 47. | ದಂತಕಾಷ್ಠಗಳ ಅಭಾವವಿರುವಾಗ ನಿಷಿದ್ಧವಾದ ದಿನಗಳಲ್ಲಿ ದಂತಶೋಧನೆಯನ್ನು ಹೇಗೆ ನಡೆಸಬೇಕು? | 12 ಬಾರಿ ಬಾಯಿಯನ್ನು ಮುಕ್ಕಳಿಸುವುದರಿಂದ ಅಥವಾ ಎಲೆಗಳಿಂದ ದಂತಶೋಧನೆಯನ್ನು ಮಾಡಬೇಕು. | |
| 48. | ತತ್ತ್ವಜ್ಞಾನದ ಬಯಕೆಯುಳ್ಳ ಸಾಧಕನು ಪೂಜಾಕಾಲದಲ್ಲಿ ತಿಳಿದಿರಲೇ ಬೇಕಾದ ಪ್ರಧಾನಾಂಶ ಯಾವುದು? | ‘ಭಕೆ ಮಹಾವಿಷ್ಣುವು ಭಕ್ತರನ್ನು ಸದಾಕಾಲ ಪೊರೆಯುವವನಾದ್ದರಿಂದ ಅವನಿಗೆ ಪತ್ರ–ಪುಷ್ಪ–ಫಲ–ನೀರು ಇವೆಲ್ಲವನ್ನು ಭಕ್ತಿಯಿಂದ ಸಂಪಾದಿಸಿ ಸಮರ್ಪಿಸಿದರೆ ಆ ಭಗವಂತನ ಕೃಪೆ ಸದಾಕಾಲ ಭಕ್ತರ ಮೇಲೆ ಇದ್ದೇ ಇರುವುದು ಎಂಬ ದೃಢವಾದ ಜ್ಞಾನದಿಂದ ಸಹಿತನಾಗಿಯೇ ಸಾಧಕನು ಪೂಜೆಯನ್ನು ನಡೆಸಬೇಕು | |
| 49. | ಚಾಮರವು ಹೇಗಿರಬೇಕು? | ಮಣಿಗಳಿಂದ ರಚಿಸಲ್ಪಟ್ಟ ದಂಡ, ಬೆಳ್ಳಗಿನ ನಯವಾದ ಚಮರೀಪುಚ್ಛಕೇಶವಾಗಿರಬೇಕು. | |
| 50. | ಪಾದುಕೆ ಹೇಗಿರಬೇಕು? | ಪದ್ಮಾದಿ ಚಿಹ್ನೆಗಳಿಂದ ಕೂಡಿಕೊಂಡ ರತ್ನಗಳಿಂದ ಶೋಭಿತವಾದ ಬಂಗಾರದಿಂದ ನಿರ್ಮಿತವಾದ ಪಾದುಕೆಯಾಗಿರಬೇಕು. | |
| 51. | ಛತ್ರವು ಹೇಗಿರಬೇಕು? | ಮುಕುಟಾಕಾರದ ರೇಷ್ಮೆವಸ್ತ್ರದಿಂದ ಸುತ್ತುವರಿಯಲ್ಪಟ್ಟಿರುವುದು ಆಗಿರಬೇಕು. | |
| 52. | ಧರ್ಮಾಂಗಗಳು ಯಾವುವು? | ಶೌಚಾಚಾರ ಮತ್ತು ಆಸನಸಿದ್ಧಿ. ಅರ್ಥಾತ್ ಕಾಯಿಕ–ವಾಚಿಕ–ಮಾನಸಿಕ ಶುದ್ಧಿ ಮತ್ತು ಧ್ಯಾನೋಚಿತವಾದ ಆಸನಗಳಲ್ಲಿ ನೈಪುಣ್ಯ ಇವೆರಡೂ ಧರ್ಮಾಂಗವೆನಿಸಿವೆ. | |
| 53. | ವೈಷ್ಣವ ದೀಕ್ಷೆ ಹೊಂದಿದ ಬಳಿಕ ಸಾಧಕನು ಸಾಗಬೇಕಾದ ಮಾರ್ಗ ಯಾವುದು? | ಭಗವಂತನು ಅಪ್ರಾಕೃತವಾದ ಚಿದಾನಂದಮಯವಾದ ದೇಹೇಂದ್ರಿಯಾದಿಗಳುಳ್ಳವನಾಗಿರುವನು ಎಂದು ಭಾವಿಸುತ್ತಾ ತನ್ನಲ್ಲಿ ಮಾಡುವ ಎಲ್ಲಾ ಆಲೋಚನೆಗಳನ್ನು ಭಗವಂತನ ಸಂಬಂಧ ಉಳ್ಳದ್ದನ್ನಾಗಿ ಮಾಡಬೇಕು. ನನ್ನಲ್ಲಿ ನೆಲೆನಿಂತ ಸರ್ವಸಮರ್ಥನಾದ ಆ ದೇವನ ಪ್ರೀತಿಗಾಗಿ ಎಲ್ಲವನ್ನು ಮಾಡುವೆನು ಎಂದು ಚಿಂತಿಸಬೇಕು. | |
| 54. | ಮೋಕ್ಷೋಪಾಸನೆ ಹೇಗಿರಬೇಕು? | ಮನುಷ್ಯೋತ್ತಮರಿಂದಾರಂಭಿಸಿ ಚತುರ್ಮುಖಬ್ರಹ್ಮದೇವರ ಪರ್ಯಂತ ಮುಕ್ತಿಯೋಗ್ಯರಾದ ಜೀವರ ತಾರತಮ್ಯಜ್ಞಾನ, ನಿತ್ಯಮುಕ್ತಳಾದ ಲಕ್ಷ್ಮೀದೇವಿಯ ಜ್ಞಾನ, | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| | | ಇವರೆಲ್ಲರಿಗಿಂತಲೂ ಸದಾ ಭಿನ್ನನೇ ಆಗಿರುವ ಭಗವಂತನ ಪರಿಪೂರ್ಣ ಉಪಾಸನೆ ಇದರಿಂದ ಪ್ರಸನ್ನನಾಗುವ ಪರಮಾತ್ಮನು ಮೋಕ್ಷವನ್ನು ಕೊಟ್ಟೇ ಕೊಡುವನು. | | |

ಲಿಕುಚಕುಲಪಂಡಿತಾಚಾರ್ಯ ಪರೀಕ್ಷೆ –2024–2025

## ಸಂಗ್ರಹ ರಾಮಾಯಣ

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 1. | ವಿಶ್ವಾಮಿತ್ರರ ತಂದೆಯಾದ ಗಾಧಿಯ ತಂದೆಯ ಹೆಸರೇನು ? | ಕುಶನಾಭ | | |
| 2. | ಗಾಧಿ ಯಾರ ಅವತಾರ | ಇಂದ್ರನ ಅವತಾರ | | |
| 3. | ಸಗರನ ಅಶ್ವಮೇಧ ಯಾಗದಲ್ಲಿ ಕುದುರೆಯನ್ನು ಅಪಹರಿಸಿದವರು ಯಾರು ? | ಇಂದ್ರ | | |
| 4. | ಕುದುರೆಯನ್ನು ಹುಡುಕುತ್ತಾ ಹೊರಟ ಸಗರನ ಅರವತ್ತು ಸಾವಿರ ಮಕ್ಕಳು ಭೂಮಿಯನ್ನು ಅಗೆದಾಗ ಆದದ್ದೇನು ? | ಸಾಗರ | | |
| 5. | ಸಗರ ಪುತ್ರರು ಯಾರನ್ನು ಕುದುರೆಯ ಕಳ್ಳನೆಂದು ತಿಳಿದರು ? | ಕಪಿಲನಾಮಕ ಪರಮಾತ್ಮ | | |
| 6. | ಸಗರನ ಮಕ್ಕಳು ಕಪಿಲ ಋಷಿಗಳನ್ನು ಆಕ್ರಮಿಸಿದಾಗ ಏನಾಯಿತು ? | ಆ ಕಪಿಲನ ಕಣ್ಣಿನಿಂದ ಹೊಮ್ಮಿದ ಬೆಂಕಿಗೆ ಭಸ್ಮವಾದರು | | |
| 7. | ನಂತರ ಆ ಸಗರನ ಕುದುರೆಯನ್ನು ಯಾರು ತಂದರು ? | ಮೊಮ್ಮಗನಾದ ಅಂಶುಮಂತ | | |
| 8. | ಸದ್ಗತಿಯಾಗದ ಸಗರನ ಮಕ್ಕಳು ಸ್ವರ್ಗಕ್ಕೆ ತೆರಳಲು ಕಪಿಲ ನೀಡಿದ ಉಪಾಯವೇನು ? | ಗಂಗಾವತರಣ | | |
| 9. | ರಭಸದಿ ದುಮುಕಿದ ಗಂಗೆಯನ್ನು ಧರಿಸಲು ಸಮರ್ಥನಾದವ ಯಾರು ? | ವೈಷ್ಣವಾಗ್ರೇಸರ ರುದ್ರ | | |
| 10. | ಜಹ್ನುವಿನ ಮಗಳಾದ ಗಂಗೆಯ ಹೆಸರೇನು ? | ಜಾಹ್ನವಿ | 53 | 5 |
| 11. | ಸಮುದ್ರಮಥನದಲ್ಲಿ ಕಡೆಗೋಲು ಯಾವುದು ? | ಮಂದರ ಪರ್ವತ | 5 | 6 |
| 12. | ಸಮುದ್ರಮಥನದಲ್ಲಿ ಹಗ್ಗ ಯಾವುದು ? | ವಾಸುಕಿ | 5 | 6 |
| 13. | ಮಹಾಶಕ್ತಿಯಾಗಿ ಸಮುದ್ರಮಥನವನ್ನು ನಡೆಸಿದ ಭಗವಂತನ ರೂಪ | ಅಜಿತ | 7 | 6 |
| 14. | ಅಮೃತವನ್ನು ತಂದ ಭಗವಂತನ ರೂಪ | ಧನ್ವಂತರಿ | 8 | 6 |
| 15. | ಅಸುರರನ್ನು ಮೋಹಗೊಳಿಸಿ ಅಮೃತವನ್ನು ದೇವತೆಗಳಿಗೆ ನೀಡಿದ ಭಗವಂತನ ರೂಪ | ಸ್ತ್ರೀರೂಪ (ಮೋಹಿನಿ) | 9 | 6 |
| 16. | ದಿತಿಯ ಗರ್ಭವನ್ನು ಕತ್ತರಿಸಲು ಹೋದವ ಯಾರು | ಇಂದ್ರ | 10 | 6 |
| 17. | ಮರುದ್ದೇವತೆಗಳಿಗೆ ಈ ಹೆಸರು ಬರಲು ಕಾರಣವೇನು ? | ಇಂದ್ರದೇವ ಗರ್ಭವನ್ನು ಸೀಳುತ್ತಾ ಮಾ ರೋದೀಃ (ಅಳಬೇಡ) ಎಂದಿದ್ದರಿಂದ | 11 | 6 |
| 18. | ದಿತಿಯ ಮಕ್ಕಳಾಗಿ ಹುಟ್ಟಿದ ಮರುದ್ದೇವತೆಗಳು ದೈತ್ಯರ ಜೊತೆ ಸೇರದೇ ಇಂದ್ರನ ಅನುಯಾಯಿಗಳಾದರು. ಇದರಿಂದ ತಿಳಿಯುವುದೇನು ? | ಉತ್ತಮರಿಗೆ ಶ್ರೇಯೋಮಾರ್ಗ ಕಟ್ಟಿಟ್ಟ ಬುತ್ತಿ | 12 | 6 |
| 19. | ವೈಶಾಲಿ ಪಟ್ಟಣದ ವಿಶಾಲರಾಜನ ತಂದೆ ತಾಯಿ | ಇಕ್ಷ್ವಾಕು–ಅಲಂಬುಸಾ ಎಂಬ ಅಪ್ಸರೆ | 13 | 6 |
| 20. | ಶ್ರೀರಾಮ ಅಹಲ್ಯೆಯನ್ನು ಉದ್ಧರಿಸಿದ ಸ್ಥಳ | ಮಿಥಿಲೆಯ ಉಪವನದ ಹತ್ತಿರ | 17 | 6 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 21. | ದೇವಶ್ರೇಷ್ಠನಾದ ಇಂದ್ರ ಅಹಲ್ಯೆಯ ಬಳಿ ಬಂದದ್ದು ಏಕೆ | ದೇವಕಾರ್ಯ (ಗೌತಮರಿಗೆ ಕೋಪ ಬರುವ ಮೂಲಕ ಅವರು ಸಂಪಾದಿಸಿದ ಹೆಚ್ಚಿನ ಪುಣ್ಯವನ್ನು ಕಳೆಯಲು) | 18 | 6 |
| 22. | ಪರಪುರುಷನನ್ನು ಸೇರಿದ ಅಹಲ್ಯಗೆ ಶಿಲೆಯಾಗೆಂದು ನೀಡಿದ ಶಾಪ ಗೌತಮರೇ ಸೂಚಿಸಿದಂತೆ ಪರಿಹಾರವಾದದ್ದು ಹೇಗೆ? | ರಾಮಾವಲೋಕನದಿಂದ ಶಾಪಮೋಕ್ಷವಾಗಲಿ ಎಂದು | 20 | 6 |
| 23. | ಅಹಲ್ಯೆಯ ಶಾಪ ವಿಮೋಚನೆಯಾದದ್ದು ಹೇಗೆ | ರಾಮನ ದರ್ಶನದಿಂದ | 24 | 6 |
| 24. | ಜನಕನು ರಾಮನನ್ನು ಕಂಡಾಗ ಅವನ ಮುಖದಲ್ಲಿ ನೋಡಿದ ಗುಣಗಳು | ಮುಂದಹಾಸದ ಮುಖ, ಮಿತವಾದ ಮಾತು | 33 | 6 |
| 25. | ಸ್ತ್ರೀಯರಿಗೆ ಮನ್ಮಥ, ವೈರಿಗಳಿಗೆ ಯಮ, ಯೋಗಿಗಳಿಗೆ ದೇವ. ಯಾರಿವನು | ಶ್ರೀರಾಮ | 44 | 6 |
| 26. | ವಸಿಷ್ಠರ ಕಾಮಧೇನುವನ್ನು ಅಪಹರಿಸಿದವರು ಯಾರು? | ವಿಶ್ವಾಮಿತ್ರರು | 46 | 6 |
| 27. | ಆ ಕಾಮಧೇನುವಿನಿಂದ ಹುಟ್ಟಿದವರು ಯಾರು ? | ಶಕರು, ಮ್ಲೇಚ್ಛರು, ಯವನರು . . . | 47 | 6 |
| 28. | ವಿಶ್ವಾಮಿತ್ರರು ಯಾರ ಅನುಗ್ರಹದಿಂದ ಬ್ರಹ್ಮಾಸ್ತ್ರಾದಿಗಳನ್ನು ಪಡೆದರು | ರುದ್ರದೇವರ | 48 | 6 |
| 29. | ವಿಶ್ವಾಮಿತ್ರರ ಆಕ್ರಮಣವನ್ನು ವಸಿಷ್ಠರು ಹೇಗೆ ಎದುರಿಸಿದರು | ವೈಷ್ಣವ ಬ್ರಹ್ಮದಂಡದಿಂದ | 49 | 6 |
| 30. | ವಸಿಷ್ಠರ ಶಾಪದಿಂದ ಚಂಡಾಲನಾಗಿದ್ದವ ಯಾರು | ತ್ರಿಶಂಕು | 50 | 6 |
| 31. | ಚಂಡಾಲನಾದ ತ್ರಿಶಂಕುವನು ಸ್ವರ್ಗಕ್ಕೆ ಕಳುಹಿಸಿದವರು | ವಿಶ್ವಾಮಿತ್ರರು | 50 | 6 |
| 32. | ಯಜ್ಞಪಶುವಾಗಿ ನಿಯೋಜಿತನಾಗಿದ್ದವ ಯಾರು | ಶುನಃಶೇಫ | 50 | 6 |
| 33. | ಶುನಃಶೇಫನನ್ನು ಮಗನನ್ನಾಗಿ ಸ್ವೀಕರಿಸಿದವರು | ವಿಶ್ವಾಮಿತ್ರರು | 50 | 6 |
| 34. | ತಮ್ಮ ತೀವ್ರವಾದ ತಪಸ್ಸಿನ್ನಿಂದ ವಿಶ್ವಾಮಿತ್ರರು ಪಡೆದ ಸ್ಥಾನ | ರಾಜರ್ಷಿತ್ವ, ಋಷಿತ್ವ, ಮಹರ್ಷಿತ್ವ, ಕೊನೆಗೆ ಬ್ರಹ್ಮರ್ಷಿತ್ವ | 53 | 6 |
| 35. | ಸೀತಾ ಎಂದರೇನು | ಸೀರಾ ಎಂದರೆ ನೇಗಿಲು, ಅದರ ತುದಿಯಿಂದ ದೊರೆತವಳು ಸೀರಜಾತಾ ಎನ್ನುವುದರ ಸಂಕ್ಷೇಪವೇ ಸೀತಾ | | |
| 36. | ಆ ಶಿವಧನಸ್ಸನ್ನು ಎತ್ತಲು ಆಗದಿದ್ದಾಗ ಸೀತೆಯನ್ನು ಅಪಹರಿಸಲು ಬಂದ ದುಷ್ಟರನ್ನೆಲ್ಲಾ ನಿಗ್ರಹಿಸುತ್ತಿದ್ದದ್ದು | ಬ್ರಹ್ಮದೇವರ ವರಬಲದಿಂದ | 10 | 7 |
| 37. | ಸಭೆಗೆ ಶಿವಧನಸ್ಸನ್ನು ತಂದದ್ದು ಹೇಗೆ | ಎಂಟು ಚಕ್ರಗಳ ದೊಡ್ಡ ಮಂಜೂಷೆಯಲ್ಲಿ, 5000 ವೀರರು ತಂದದ್ದು | | |
| 38. | ಧನಸ್ಸನ್ನು ಹದೆಯೇರಿಸಲು ಬಂದ ರಾಮನನ್ನು ನೋಡಿ ಅಲ್ಲಿನ ಸ್ತ್ರೀಯರು ಮಾತನಾಡಿಕೊಂಡದ್ದು | ಇಂತಹ ಮಗನನ್ನು ಪಡೆದ ತಂದೆತಾಯಿಯರೇ ಧನ್ಯರು | | |
| 39. | ರಾಮನು ಸೀತಾಪತಿ ಎಂದು ಈ ಧನುಸ್ಸಿನಿಂದ ಪರೀಕ್ಷಿಸಬೇಕಿಲ್ಲ ಎಂಬುದಕ್ಕೊಂದು ಉದಾಹರಣೆ | ಸೂರ್ಯನ ಪ್ರಕಾಶವನ್ನು ದೀಪದಿಂದ ಪರೀಕ್ಷಿಸಬೇಕಿಲ್ಲ | | |
| 40. | ತಾಳೆಯ ಮರದಷ್ಟು ದೊಡ್ಡ ಧನುಸ್ಸನ್ನು ರಾಮ ಮುರಿದದ್ದು ಎಂಬುದಕ್ಕೊಂದು ಉದಾಹರಣೆ | ಇಂದ್ರನ ಐರಾವತ ಕಬ್ಬಿನ ಕೋಲನ್ನು ಮುರಿದಂತೆ | | |
| 41. | ಧನುರ್ಭಂಗದಿಂದ ಬಂದ ಶಬ್ದ ಏನೆಂದು ಸೂಚಿಸುತ್ತಿದೆ | ದೂತನೊಬ್ಬ ರಾಮನಿಗೆ ಸೀತೆ ದೊರಕಿದಳು ಎಂಬುದನ್ನು ಲೋಕಕ್ಕೆಲ್ಲಾ ಸಾರುವಂತೆ | | |
| 42. | ಚತುರವದನನಾದ ಬ್ರಹ್ಮನೂ ಅಚತುರನಾದದ್ದು ಎಲ್ಲಿ | ಲಕ್ಷ್ಮಿಯನ್ನು ಹೊಗಳುವಲ್ಲಿ | 30 | 7 |

| | | | | |
| --- | --- | --- | --- | --- |
| 43. | ಜನಕನ ದೂತರು ಎಷ್ಟು ದಿನದಲ್ಲಿ ಅಯೋಧ್ಯೆಗೆ ಬಂದರು ? | 3 ದಿನದಲ್ಲಿ | 02 | 8 |
| 44. | ಸೀರಧ್ವಜನಾದ ಜನಕನ ಯಾವ ಇಬ್ಬರು ಮಕ್ಕಳನ್ನು ಯಾರಿಗೆ ಮದುವೆ ಮಾಡಿಕೊಟ್ಟನು | ಸೀತೆ ಮತ್ತು ಊರ್ಮಿಳೆಯನ್ನು ರಾಮಲಕ್ಷ್ಮಣರಿಗೆ ನೀಡಿದನು | 13 | 8 |
| 45. | ಭರತ ಶತ್ರುಘ್ನರು ಯಾರನ್ನು ಮದುವೆ ಆದರು | ಜನಕನ ತಮ್ಮನಾದ ಕುಶಧ್ವಜನ ಮಕ್ಕಳನ್ನು | 21 | 8 |
| 46. | ವಿವಾಹದ ಸಂದರ್ಭದಲ್ಲಿ ಜನಕನು ವಿಪ್ರರಿಗೆ ನೀಡಿದ ದಾನ | 4000 ಗೋವುಗಳು | 24 | 8 |
| 47. | ರಾಮಲಕ್ಷ್ಮಣರ ವಿವಾಹವಾದ ದಿನದ ನಕ್ಷತ್ರ ಯಾವುದು? | ಉತ್ತರಾ ನಕ್ಷತ್ರ | 28 | 8 |
| 48. | ರಾಮನ ಹಸ್ತದಲ್ಲಿದ್ದ ಚಿಹ್ನೆ | ಚಕ್ರ | 31 | 8 |
| 49. | ಸೀತೆಯ ಹಸ್ತದಲ್ಲಿದ್ದ ಚಿಹ್ನೆ | ಕಮಲ | 31 | 8 |
| 50. | ಭರತ ಶತ್ರುಘ್ನರನ್ನು ವರಿಸಿದ ಕುಶಧ್ವಜನ ಇಬ್ಬರು ಮಕ್ಕಳು | ಮಾಲವೀ, ಶ್ರುತಕೀರ್ತಿ | 37 | 8 |
| 51. | ರಾಮಸೀತೆಯರ ದಾಂಪತ್ಯಕ್ಕೆ ನೀಡಿದ ಉದಾಹರಣೆ | ದಕ್ಷಿಣ–ಯಜ್ಞ, ಲಕ್ಷ್ಮೀ–ನಾರಾಯಣ, ಜಯಂತೀ–ಋಷಭ | 42 | 8 |
| 52. | ದಶರಥಾದಿಗಳು ಅಯೋಧ್ಯೆಗೆ ಹಿಂತಿರುಗಿದಾಗ ಆದ ಅಪಶಕುನಗಳು | ಪ್ರಾಣಿಗಳು ಪ್ರದಕ್ಷಿಣಾಕಾರವಾಗಿ ತಿರುಗುವುದು . . . | 48 | 8 |
| 53. | ಪರಶುರಾಮ ದೇವರು ಎಷ್ಟು ಬಾರಿ ತಿರುಗಿ ಭೂಮಿಯಲ್ಲಿರುವ ಕ್ಷತ್ರಿಯರನ್ನು ನಾಶ ಮಾಡಿದರು | 21 ಬಾರಿ | 51 | 8 |
| 54. | ಪರಶುರಾಮ ದೇವರು ತಮ್ಮ ಹುಂಕಾರದಿಂದ ಶಿವನನ್ನು ನಿಗ್ರಹಿಸಿದು ಹೇಗಿತ್ತು | ಗರುಡನು ಹಾವನ್ನು ಸ್ತಂಭನಗೊಳಿಸಿದಂತೆ | 52 | 8 |
| 55. | ಪಿನಾಕ ಧನಸ್ಸನ್ನು ಮುರಿದ ಶ್ರೀರಾಮನಿಗೆ ಪರಶುರಾಮನು ಕೊಟ್ಟ ಮತ್ತೊಂದು ಧನಸ್ಸು ಯಾವುದು | ವೈಷ್ಣವ ಧನಸ್ಸು ಶಾರ್ಙ್ಗ ಧನಸ್ಸು | 60 | 8 |
| 56. | ಪರಶುರಾಮನು ಕೊಟ್ಟ ಧನಸ್ಸನ್ನು ಶ್ರೀರಾಮ ಹೆದೆಯೇರಿಸಿ ಅದನ್ನು ಎಲ್ಲಿ ಪ್ರಯೋಗಿಸಿದನು? | ಪರಶುರಾಮ ದೇವರ ಒಳಗೆ ವರಪಡೆದಿದ್ದ ಅತುಲ ಅಸುರನಲ್ಲಿ | 69 | 8 |
| 57. | ಪರಶುರಾಮನಲ್ಲಿ ಪ್ರಯೋಗಿಸಿದ ರಾಮನ ಬಾಣ ಯಾರನ್ನು ಕೊಂದಿತು | ಅತುಲ ಎಂಬ ರಾಕ್ಷಸನನ್ನು | 70 | 8 |
| 58. | ಪರಶುರಾಮ ದೇವರು ಶ್ರೀರಾಮನ ವಿಷಯದಲ್ಲಿ ತಿಳಿಸಿದ ನಿರ್ಣಯವೇನು? | ಇವನೇ ಶ್ರೀಮನ್ನಾರಾಯಣ | 71 | 8 |
| 59. | ಪರಶುರಾಮರು ಶ್ರೀರಾಮನ ಸಾರ್ವಭೌಮವನ್ನು ಜಗತ್ತಿಗೆ ತಿಳಿಸಿ ಎಲ್ಲಿಗೆ ಹೋದರು | ಮಹೇಂದ್ರ ಪರ್ವತಕ್ಕೆ ಹೋದರು | 72 | 8 |
| 60. | ಶ್ರೀರಾಮ ಪರಶುರಾಮರ ಯುದ್ಧವನ್ನು ನೋಡಿದ ದೇವತೆಗಳು ಏನೆಂದರು | ಇವರಿಬ್ಬರೂ ಭಗವಂತನ ಸ್ವರೂಪರೇ. ಇವರಿಬ್ಬರಲ್ಲಿ ಯಾವುದೇ ರೀತಿಯ ಭೇದವಿಲ್ಲ | 73 | 8 |
| 61. | ವಿವಾಹಿತರಾದ ರಾಮ ಸೀತೆಯರು ಅಯೋಧ್ಯೆಯನ್ನು ಪ್ರವೇಶಿಸಿದಾಗ ಆ ಪಟ್ಟಣವು ಹೇಗೆ ಕಾಣುತ್ತಿತ್ತು | ಇಂದ್ರನ ಅಮರಾವತಿಪುರದಂತೆ | 77 | 8 |
| 62. | ವಿವಾಹವಾದ ನಂತರ ಭರತಶತ್ರುಘ್ನರು ಹೇಗಿದ್ದರು? | ಸೋದರ ಮಾವನಾದ ಕೇಕಯ ರಾಜನ ಮನೆಯಲ್ಲಿ ವಿದ್ಯಾಭ್ಯಾಸ ನಿರತರಾಗಿದ್ದರು. | 2 | 2.1 |
| 63. | ರಾಮನ ಪಟ್ಟಾಭಿಷೇಕದ ವಿಷಯದಲ್ಲಿ ದಶರಥನು ಯಾರೊಟ್ಟಿಗೆ ಆಲೋಚಿಸಿದನು? | ಸುಮಂತ್ರ ಮೊದಲಾದ ಮಂತ್ರಿಗಳೊಡನೆ ಮತ್ತು ಮಂತ್ರ ಸಿದ್ಧರಾದ ವಿಪ್ರರೊಡನೆ | 4 | 2.1 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 64. | ದಶರಥನು ರಾಮನಿಗೆ ಪಟ್ಟಾಭಿಷೇಕವನ್ನು ಮಾಡಬೇಕು ಎಂದು ನಿರ್ಧಾರ ಮಾಡುವ ಮೊದಲೇ ರಾಮನಿಗೆ ಅಭಿಷೇಕವಾಗಿತ್ತು ಹೇಗೆ? | ಅಯೋಧ್ಯೆಯ ಎಲ್ಲ ಜನರು ತಮ್ಮ ಮಾನಸಿಕವಾಗಿ ಆಗಾಗಲೇ ಅಭಿಷೇಕವನ್ನು ಮಾಡಿದ್ದರು | 9 | 2.1 |
| 65. | ಅಣುವಿಗಿಂತಲೂ ಅಣು, ಮಹತ್ತಿಗಿಂತಲೂ ಮಹತ್ತು, ಗುರುವಿಗಿಂತಲೂ ಗುರು, ಲಘುವಿಗಿಂತಲೂ ಲಘು. ಈ ಮಾತು ಯಾರ ಬಗ್ಗೆ ನುಡಿದದ್ದು? | ಶ್ರೀರಾಮಚಂದ್ರನ ಬಗ್ಗೆ | 12 | 2.1 |
| 66. | ಶ್ರೀ ರಾಮನಿಗೋಸ್ಕರ ಭೂಮಿಯನ್ನು ಭೇದಿಸಿ ಬಂದವಳು ಯಾರು? | ಮಹಾಲಕ್ಷ್ಮೀ | 15 | 2.1 |
| 67. | ಸಂಪತ್ತು, ರಾಜ್ಯ, ಕೋಶ ಮೊದಲಾದ ಲೌಕಿಕ ಸುಖದಲ್ಲಿ ಅನುರಾಗವಿಲ್ಲದವ ಶ್ರೀ ರಾಮ. ಏಕೆ? | ಸದಾ ಸ್ವರೂಪಾನಂದದಲ್ಲಿಯೇ ಸುಖವಾಗಿರುವವನು | 17 | 2.1 |
| 68. | ರಾಜ ನೀತಿಯಲ್ಲಿ ಹೇಳಿದ ಆರು ಗುಣಗಳನ್ನು, ಐದು ಭಾವವನ್ನು, ಮೂರು ಶಕ್ತಿಯನ್ನು ಹೊಂದಿದ ವ್ಯಕ್ತಿ ಯಾರು? | ಶ್ರೀರಾಮಚಂದ್ರ | 18 | 2.1 |
| 69. | ಬ್ರಹ್ಮದೇವರ ಶ್ರೇಷ್ಠತೆ, ರುದ್ರದೇವರ ಪರಾಕ್ರಮ ರಾಮನ ಗುಣಗಳಿಗೆ ಹೋಲಿಸಬಹುದೇ ? | ಇವೆಲ್ಲವೂ ಶ್ರೀ ರಾಮನ ಗುಣಗಳಿಗೆ ಪ್ರತಿಬಿಂಬ ಮಾತ್ರ | 19 | 2.1 |
| 70. | ಕಾಮನ ಕಾಂತಿ, ಚಂದ್ರನ ಶಾಂತಿ, ಸೂರ್ಯನ ಪ್ರಭೆ, ಕುಬೇರನ ಸಂಪತ್ತು, ಭೂಮಿಯ ಕ್ಷಮಾ ಈ ಎಲ್ಲ ಗುಣಗಳು ಎಲ್ಲಿಂದ ಬಂದದ್ದು? | ರಾಮನ ಗುಣಗಳನ್ನು ನೋಡಿ ಕಲಿತದ್ದು | 20 | 2.1 |
| 71. | ಶ್ರೀರಾಮನಿಗೆ ಯಾವುದೇ ರೀತಿಯ ಕಾಮನೆಗಳು ಇರಲಿಲ್ಲ ಏಕೆ? | ಎಲ್ಲಾ ರೀತಿಯ ಕಾಮನೆಗಳಿಂದ ಸದಾ ಕಾಲ ಪೂರ್ಣನಾದವನು ಹಾಗಾಗಿ | 22 | 2.1 |
| 72. | ರಾಮನಿಗೆ ಎಂದೂ ಕೋಪ ಬರುವ ಪ್ರಸಂಗವೇ ಇರಲಿಲ್ಲ ಏಕೆ? | ಅವನಿಗೆ ಪ್ರಿಯವಾದದ್ದೆಲ್ಲ ನಡೆಯುತ್ತಿತ್ತು, ಅವನಿಗೆ ಅಪ್ರಿಯವಾದದ್ದು ಯಾವುದು ನಡೆಯುವುದಿಲ್ಲ | 23 | 2.1 |
| 73. | ಶ್ರೀರಾಮ ಸಂತೋಷದಿಂದ ಈ ರಾಜ್ಯವನ್ನೇ ಬಿಟ್ಟು ಕಾಡಿಗೆ ಹೋಗಲು ಸಮರ್ಥ. ಇದರಲ್ಲಿ ನಾವು ತಿಳಿದುಕೊಳ್ಳಬೇಕಾದದ್ದು | ರಾಮನಿಗೆ ಸ್ವಲ್ಪವೂ ಲೋಭವಿರಲಿಲ್ಲ | 24 | 2.1 |
| 74. | ರಾಮನ ಅನುಗ್ರಹದಿಂದಲೇ ಎಲ್ಲ ದೋಷಗಳು ದೂರವಾಗುವಾಗ ರಾಮನಿಗೆ ಮೋಹವೆಲ್ಲಿ? ಇದಕ್ಕೊಂದು ಉದಾಹರಣೆ | ಕತ್ತಲೆಯನ್ನು ಓಡಿಸುವ ಸೂರ್ಯನಿಗೆ ಅಂಧಕಾರವೆಲ್ಲಿ | 25 | 2.1 |
| 75. | ತನ್ನಲ್ಲಿಲ್ಲದ ಗುಣಗಳನ್ನು ಇವೆ ಎಂದು ಭ್ರಮಿಸುವುದೇ ಅಹಂಕಾರ. ಇಂತಹ ಅಹಂಕಾರ ರಾಮನಗಿರಲಿಲ್ಲ ಏಕೆ? | ರಾಮನಲ್ಲಿ ಇಂತಹ ಗುಣವಿಲ್ಲ ಎಂಬುವುದೇ ಅಸಂಭಾವಿತ ಹಾಗಾಗಿ | 26 | 2.1 |
| 76. | ಇವನು ನನ್ನ ಅಧೀನದಲ್ಲಿಲ್ಲ ಎಂಬ ಮಾತ್ಸರ್ಯ ರಾಮನಿಗೆ ಇರಲಿಲ್ಲ ಏಕೆ? | ಎಲ್ಲರೂ ರಾಮನಿಗೆ ವಶರಾಗಿದ್ದರು ಹಾಗಾಗಿ | 27 | 2.1 |
| 77. | ಎಲ್ಲ ಗುಣಗಳಿಂದ ತುಂಬಿದವ ಶ್ರೀರಾಮ, ಯಾವುದೇ ದೋಷಗಳ ಸ್ಪರ್ಶವೂ ಇಲ್ಲದವ ಶ್ರೀರಾಮ. ಇದಕ್ಕೇನು ಪ್ರಮಾಣ | ಪ್ರತ್ಯಕ್ಷ ಯುಕ್ತಿ ಮತ್ತು ಶ್ರುತಿಗಳು | 29 | 2.1 |
| 78. | ರಾಮನಿಗೆ ರಾಜ್ಯವನ್ನು ನೀಡುವುದರಿಂದ ದಶರಥನಿಗೆ ಒಳಿತು ಎಂದವರಾರು? | ವಸಿಷ್ಠ ಮೊದಲಾದವರು | 31,32 | 2.1 |
| 79. | ದಶರಥನು ರಾಮನಿಗೆ ಪಟ್ಟಾಭಿಷೇಕವನ್ನು ಮಾಡೋಣ ಎಂದಾಗ ಹಿರಿಯರು ನೀಡಿದ ಮುಹೂರ್ತ | ಮರುದಿನವೇ ಚೈತ್ರ ಮಾಸದ ಪುಷ್ಯ ಯೋಗ | 4 | 2.2 |
| 80. | ನೂರು ಪುಣ್ಯತೀರ್ಥಗಳ ಜಲವನ್ನು ಸಂಗ್ರಹಿಸಿದ್ದು ಏತಕ್ಕಾಗಿ | ಶ್ರೀ ರಾಮನ ಪಟ್ಟಾಭಿಷೇಕಕ್ಕಾಗಿ | 6 | 2.2 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 81. | ದಶರಥನ ಆದೇಶದಂತೆ ರಾಮನನ್ನು ಕರೆತಂದವ ಯಾರು | ಸುಮಂತ್ರ | 8 | 2.2 |
| 82. | ರಾಮನ ಪಟ್ಟಾಭಿಷೇಕವಾಗುವುದಕ್ಕೂ ಮೊದಲೇ ದಶರಥ ಕೃತಕೃತ್ಯನಾಗಿದ್ದ ಹೇಗೆ | ತನ್ನ ಆನಂದಭಾಷ್ಪಗಳಿಂದ ಅಭಿಷೇಕವನ್ನು ಮಾಡಿ | 20 | 2.2 |
| 83. | ರಾಮನಿಗೆ ಪಟ್ಟಾಭಿಷೇಕವನ್ನು ಮಾಡುವ ನಿರ್ಧಾರವನ್ನು ತಿಳಿಸಿದ ನಂತರದಲ್ಲಿ ದಶರಥನು ಬಹಳ ಚಿಂತಿತನಾದ ಏಕೆ | ಅಪಶಕುನಗಳಿಂದಾಗಿ | 26 | 2.2 |
| 84. | ರಾಮನ ಪಟ್ಟಾಭಿಷೇಕದ ತೀರ್ಮಾನವಾದಾಗ ಕೌಸಲ್ಯೆಯು ರಾಮನಿಗೆ ಆದೇಶಿಸಿದ ಬಗೆ | ದುಷ್ಟರನ್ನು ಸಂಹರಿಸು ಸಜ್ಜನರನ್ನು ರಕ್ಷಿಸು | 33 | 2.2 |
| 85. | ಕೈಕೆಯಿಯ ಮನೆಯಲ್ಲಿದ್ದ ಮಂಥರೆಯು ಅಯೋಧ್ಯೆಯ ಮಹೋತ್ಸವದ ಬಗ್ಗೆ ಯಾರಲ್ಲಿ ವಿಚಾರಿಸಿದಳು | ಸೇವಕಿಯಲ್ಲಿ | 2 | 2.3 |
| 86. | ರಾವಣ ಪಟ್ಟಾಭಿಷೇಕದ ವಿಷಯವನ್ನು ತಿಳಿದ ಮಂಥರೆಯು ಹೇಗಾದಳು | ಪೆಟ್ಟು ತಿಂದ ಹಾವಿನಂತೆ, ತನ್ನ ಮರಿಯನ್ನು ಕಳೆದುಕೊಂಡ ಹುಲಿಯಂತೆ ವ್ಯಘ್ರವಾದಳು | 5 | 2.3 |
| 87. | ಮಂಥರೆ ಯಾರು? | ಅಲಕ್ಷ್ಮಿ | 6 | 2.3 |
| 88. | ಮಂಥರೆ ರಾಮನ ಪಟ್ಟಾಭಿಷೇಕವನ್ನು ತಿಳಿಸಿದಾಗ ಕೈಕೆಯಿಯು ಏನು ಮಾಡಿದಳು | ಸಂತೋಷದಿಂದ ಅವಳಿಗೆ ಆಭರಣವನ್ನು ನೀಡಿದಳು | 9 | 2.3 |
| 89. | ಕೈಕೆಯಿಯು ರಾಮನನ್ನು ದ್ವೇಷ ಮಾಡದೆ ಇರಲು ಅವಳು ನೀಡಿದ ಕಾರಣ | ಅವನು ಎಲ್ಲರಿಗಿಂತಲೂ ದೊಡ್ಡವ, ಜಗತ್ತು ಅವನನ್ನು ಒಪ್ಪಿಕೊಂಡಿದೆ, ನನ್ನನ್ನು ತಾಯಿಯ ಸ್ಥಾನದಲ್ಲಿಟ್ಟು ಗೌರವಿಸುತ್ತಾನೆ ಹಾಗಾಗಿ | 11 | 2.3 |
| 90. | ಈ ಪಟ್ಟಾಭಿಷೇಕದ ವಿಷಯದಲ್ಲಿ ಸಂದೇಹ ಮೂಡುವಂತೆ ಮಂಥರೆ ಹೇಳಿದ ಮಾತು | ಭರತ ಶತ್ರುಘ್ನರು ಇಲ್ಲದೆ ಇದ್ದಾಗ ಈ ಪಟ್ಟಾಭಿಷೇಕ ನಡೆಯುತ್ತಿರುವುದು ವಂಚನೆ | 14 | 2.3 |
| 91. | ಶ್ರೀ ರಾಮನು ಭರತನನ್ನು ಕೊಲ್ಲುತ್ತಾನೆ ಎನ್ನುವುದಕ್ಕೆ ಮಂಥರೆ ನೀಡಿದ ದೃಷ್ಟಾಂತ | ಅದಿತಿಯ ಮಕ್ಕಳಾದ ದೇವತೆಗಳು ದಿತಿ ಪುತ್ರರನ್ನು ಕೊಲ್ಲುವಂತೆ | 18 | 2.3 |
| 92. | ಮಂಥರೆಯ ಮಾತಿನಿಂದ ಕೈಕೇಯಿಯ ಮತಿ ಭ್ರಮಣೆಯಾದಾಗ ಅವಳು ಹೇಳುವ ಮಾತು | ಯಾವ ಉಪಾಯದಿಂದ ನನ್ನ ಮಗನಿಗೆ ರಾಜ್ಯ ಸಿಗುವಂತೆ ಮಾಡಬಹುದು | 19 | 2.3 |
| 93. | ದಶರಥನಲ್ಲಿ ಎರಡು ವರಗಳನ್ನು ಕೇಳುವಂತೆ ಕೈಕೇಯಿಗೆ ಸಲಹೆ ನೀಡಿದವರು | ಮಂಥರೆ | 22 | 2.3 |
| 94. | ಕೈಕೆಯಿಯು ಕೇಳಿದ ಎರಡು ವರಗಳ ಅಭಿಪ್ರಾಯ, ಹಿನ್ನೆಲೆ | ರಾಮ ಹದಿನಾಲ್ಕು ವರ್ಷ ಕಾಡಿನಲ್ಲಿದ್ದಾಗ ಭರತನು ಜನಗಳಿಗೆ ಪ್ರಿಯನಾಗುವನು | 23 | 2.3 |
| 95. | ಮಂಥರೆ ನೀಡಿದ ಉಪಾಯವನ್ನು ಕೇಳಿ ಕೆಕೇಯಿ ಏನು ಮಾಡಿದಳು | ತನ್ನ ಎರಡು ಕಿವಿಯೋಲೆಗಳನ್ನು ಅವಳಿಗೆ ಉಡುಗೊರೆಯಾಗಿ ನೀಡಿದಳು | 25 | 2.3 |
| 96. | ಮಂಥರೆಯ ಮಾರ್ಗದರ್ಶನದಂತೆ ಕೈಕೆಯಿ ಎಲ್ಲಿಗೆ ಹೋದಳು | ಕ್ರೋಧಾಗಾರಕ್ಕೆ | 28 | 2.3 |
| 97. | ಕೈಕೆಯನ್ನು ನೆನೆಯುತ್ತಾ ದಶರಥನು ಹೋದದ್ದಲ್ಲಿಗೆ | ಶಯ್ಯಾಗಾರಕ್ಕೆ | 26,27 | 2.3 |
| 98. | ತನಗೆ ಉಪದ್ರವವನ್ನು ಮಾಡಲು ಹೊರಟ ಕೈಕೇಯಿಗೆ ದಶರಥ ರಮಣಿ ಎಂದದ್ದು ಹೇಗಿತ್ತು | ಹಾವನ್ನು ಹಾರವೆಂದು ತಿಳಿದಂತೆ | 29 | 2.3 |
| 99. | ಕ್ರೋಧಾಗಾರದಲ್ಲಿದ್ದ ಕೈಕೆಯಿಗೆ ದಶರಥ ನುಡಿದ ಮಾತು | ದುಃಖಿಸಬೇಡ ನಿನ್ನ ಬಯಕೆ ಏನೆಂದು ಹೇಳು ಪೂರೈಸುತ್ತೇನೆ | 30 | 2.3 |
| 100. | ದಶರಥನ ಕೈಗೆ ಯಾವ ಸಂದರ್ಭದಲ್ಲಿ ಎರಡು ವರಗಳ ಮಾತನ್ನು ನೀಡಿದ್ದ | ದೇವಾಸುರರ ಸಂಗ್ರಾಮದಲ್ಲಿ ರಾತ್ರಿಯ ಹೊತ್ತು ರಾಕ್ಷಸರಿಂದ ರಕ್ಷಿಸಿದ ಸಂದರ್ಭದಲ್ಲಿ | 34 | 2.3 |
| 101. | 14 ವರ್ಷ ರಾಮನಿಗೆ ವನವಾಸ ಭರತನಿಗೆ ಪಟ್ಟಾಭಿಷೇಕ ಎಂಬ ಕೈಕೆಯ ವರವನ್ನು ಕೇಳಿ ದಶರಥ ಏನಾದ | ಮೂರ್ಛಿತನಾದ | 41 | 2.3 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 102. | ಕೈಕೇಯಿಯ ವರಗಳನ್ನು ಕೇಳಿದಾಗ ದಶರಥನಲ್ಲಿದ್ದ ಮನೋಭಾವ | ಕ್ರೋಧ ಮತ್ತು ದುಃಖ | 44 | 2.3 |
| 103. | ರಾಮನಿಲ್ಲದೆ ನಾನಿಲ್ಲ ಎಂಬುದಕ್ಕೆ ದಶರಥ ನೀಡಿದ ಉದಾಹರಣೆ. | ಸೂರ್ಯನಿಲ್ಲದೆ ಹಗಲಿಲ್ಲ, ನೀರಿಲ್ಲದೆ ಸಮುದ್ರವಿಲ್ಲ, ವಾಯುವಿಲ್ಲದೆ ಈ ಜೀವನಿಲ್ಲ | 48 | 2.3 |
| 104. | ರಾಮನು ಮತ್ತು ನಾನು ಇಲ್ಲದ ಈ ಅಯೋಧ್ಯೆಯಲ್ಲಿ ಭರತ ಇರುವುದಿಲ್ಲ ಹೇಗೆ | ಪ್ರಾಣ ಮತ್ತು ಜೀವ ಇಲ್ಲದ ದೇಹದಲ್ಲಿ ಮನಸ್ಸು ಇರುವುದಿಲ್ಲ ಹೇಗೋ ಹಾಗೆ | 49 | 2.3 |
| 105. | ಕೈಕೇಯಿ, ಈ ಮೂವರಿಗೂ ಕಳಂಕ ಎಂದು ದಶರಥ ಹೇಳಿದ್ದು | ಮಗನಾದ ಭರತನಿಗೆ ಗಂಡನಾದ ನನಗೆ ತಂದೆಯಾದ ಅಶ್ವಪತಿಗೆ | 50 | 2.3 |
| 106. | ದಶರಥ ಕೈಕೇಯಿಯ ಮಾತಿಗೆ ಒಪ್ಪದಿದ್ದಾಗ ಅವಳು ನುಡಿದ ಮಾತು | ಶಿಬಿ ಸತ್ಯತೆಗಾಗಿ ದೇಹವನ್ನೇ ತೊರೆದ, ನೀನು ರಾಜ್ಯವನ್ನು ಕೊಡಲು ಒಪ್ಪುತ್ತಿಲ್ಲವಲ್ಲ | 60 | 2.3 |
| 107. | ದಶರಥನ ಬಳಿ ರಥದಲ್ಲಿ ಹೋಗುತ್ತಿದ್ದ ರಾಮನನ್ನು ಕಂಡ ಪ್ರಜೆಗಳು ಏನೆಂದರು? | ಸಾಮಾನ್ಯ ಮನುಷ್ಯರಿಗೆ ಅಮೃತ ಸಿಕ್ಕಂತೆ ನಮಗೆ ಶ್ರೀರಾಮ ಸಿಕ್ಕಿದ್ದಾನೆ | 24 | 2.4 |
| 108. | ಕೈಕೇಯಿ ಆ ಎರಡು ವರಗಳನ್ನು ತಿಳಿಸಿದಾಗ ಶ್ರೀರಾಮ ಏನೆಂದ? | ನಾನು ಸುಖವಾಗಿ ಕಾಡಿಗೆ ಹೋಗುತ್ತೇನೆ ಭರತನಿಗೆ ಅಭಿಷೇಕವನ್ನು ಮಾಡಿ | 38 | 2.4 |
| 109. | ಕಾಡಿಗೆ ಹೋಗುವ ಸಂದರ್ಭದಲ್ಲಿ ಶ್ರೀ ರಾಮನ ವಯಸ್ಸೆಷ್ಟು | 27 ವರ್ಷ | 9 | 2.5 |
| 110. | "ಎಲ್ಲರಿಗಿಂತಲೂ ತಾಯಿ ದೊಡ್ಡವಳು" ಎಂದು ಕೌಸಲ್ಯೆ ಹೇಳಿದಾಗ ರಾಮನ ಉತ್ತರ ? | ಎಲ್ಲರಿಗಿಂತಲೂ ದೊಡ್ಡದ ಶ್ರೀಹರಿ | 15 | 2.5 |
| 111. | ಪರಶುರಾಮ ತಂದೆಯ ಮಾತಿನಂತೆ ತಾಯಿಯನ್ನು ಕೊಂದದ್ದು, ಕಂಡುಮಹರ್ಷಿಯು ತಂದೆಯ ಮಾತಿನಂತೆ ಗೋವನ್ನು ಕೊಂದದ್ದು, ಈ ಪ್ರಸಂಗವನ್ನು ಶ್ರೀರಾಮ ಉಲ್ಲೇಖಿಸಿದ್ದು ಏಕೆ | ತಂದೆಯ ಮಾತು ಮುಖ್ಯ ಎಂಬುದನ್ನು ಸಮರ್ಥಿಸಿಕೊಳ್ಳಲು | 16,17 | 2.5 |
| 112. | ರಾಮನು ಕಾಡಿಗೆ ಹೋಗುವ ನಿರ್ಧಾರವನ್ನು ಲಕ್ಷಣನಲ್ಲಿ ಸಮರ್ಥಿಸಿಕೊಂಡ ಬಗೆ | ತಂದೆಯ ಮಾತನ್ನು ಪರಿಪಾಲಿಸಲು ಮತ್ತು ಕಾಡಿನಲ್ಲಿ ಸಜ್ಜನರ ರಕ್ಷಣೆಗಾಗಿ | | 2.5 |
| 113. | ತಂದೆ ತಾಯಿಯ ಸೇವೆಯನ್ನು ಮಾಡಿಕೊಂಡು ಇಲ್ಲಿಯೇ ಇರು ಎಂದು ರಾಮ ನುಡಿದಾಗ ಲಕ್ಷ್ಮಣನ ಮಾತೇನು. | ನೀನು ನನ್ನನ್ನು ಬಿಟ್ಟು ಹೋದರೆ ಈ ದೇಹವನ್ನೇ ತೊರೆದು ಮತ್ತೊಮ್ಮೆ ಹುಟ್ಟಿಯಾದರು ನಿನ್ನ ಸೇವೆಯನ್ನು ಮಾಡುವೆ | 33 | 2.5 |
| 114. | ಎಂತಹ ಗುರುವಿನ ಮಾತನ್ನು ಕೇಳಬಾರದು | ಸ್ತ್ರೀ ವಶನಾದವನ, ಕಾಮ ಕರ್ಮದಲ್ಲಿ ತೊಡಗಿದವನ, ಕಾರ್ಯಾಕಾರ್ಯವನ್ನು – ಯಾವುದು ಕಾರ್ಯ (ಧರ್ಮ )ಯಾವುದು ಅಕಾರ್ಯ(ಅಧರ್ಮ) ಎಂಬುದನ್ನು ತಿಳಿಯದವನ | 37 | 2.5 |
| 115. | ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗು ಎಂದು ಕೌಸಲ್ಯ ನುಡಿದಾಗ ರಾಮನ ಮಾತು | ಪತಿ ಸೇವೆಯೇ ಸ್ತ್ರೀಯರಿಗೆ ಭಗವದ ಅನುಗ್ರಹಕ್ಕೆ ಕಾರಣ ಹಾಗಾಗಿ ತಂದೆಯ ಜೊತೆಗೆ ಇರುವುದು ಒಳಿತು | 42 | 2.5 |
| 116. | ರಾಮನು ಕಾಡಿಗೆ ಹೊರಟಾಗ ಕೌಸಲ್ಯೆ ಏನು ಮಾಡಿದಳು | ಕಾಡಿನಲ್ಲಿ ಅವನ ರಕ್ಷಣೆಗೆ ರಕ್ಷೋಘ್ನಮಂತ್ರವನ್ನು ಅಭಿಮಂತ್ರಿಸಿದ ಸಾಸಿವೆಯನ್ನು ರಾಮನ ಕೈಯಲ್ಲಿ ಕಟ್ಟಿದಳು | 45 | 2.5 |
| 117. | ಸೀತೆಯು ತಾನು ಕಾಡಿಗೆ ಬರುವೆ ಎಂದಾಗ ಏಕಮನಸ್ಕನಾದ ರಾಮನು ತಡೆದದ್ದು ಇದಕ್ಕಾಗಿ | ಲೋಕ ವಿಡಂಬನೆಗಾಗಿ | 3 | 2.6 |
| 118. | ರಾಮ ಲಕ್ಷ್ಮಣರು ಕಾಡಿಗೆ ಹೊರಟಾಗ ತೆಗೆದುಕೊಂಡು ಹೋದ ಆಯುಧಗಳು | ದಶರಥನಿಗೆ ವರುಣ ನೀಡಿದ ಎರಡು ಧನಸ್ಸು ಎರಡು ಖಡ್ಗ ಅಕ್ಷಯವಾದ ಬತ್ತಳಿಕೆ ಮತ್ತು ಅಭೇದ್ಯವಾದ ಕವಚ | 14 | 2.6 |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 119. | ಕಾಡಿಗೆ ಹೊರಟರಾಮ ತನ್ನ ಕಿರೀಟ ಕೇಯೂರಾದಿಗಳನ್ನು ಏನು ಮಾಡಿದ | ವಸಿಷ್ಠರ ಶಿಷ್ಯರಾದ ಸುಯಜ್ಞರಿಗೆ ಅವೆಲ್ಲವನ್ನು ದಾನ ಮಾಡಿದ | 18 | 2.6 |
| 120. | ಸೀತಾದೇವಿಯು ತನ್ನ ಆಭರಣಗಳನ್ನು ಯಾರಿಗೆ ದಾನ ಮಾಡಿದಳು | ಸುಯಜ್ಞರ ಪತ್ನಿಗೆ | 19 | 2.6 |
| 121. | ಕಾಡಿಗೆ ಹೊರಡುವ ಸಂದರ್ಭದಲ್ಲಿ ದೊಡ್ಡ ಸಂಪತ್ತಿನ ರಾಶಿಯನ್ನು ತೋರಿಸಿ ರಾಮ ಲಕ್ಷ್ಮಣನಿಗೆ ನುಡಿದ ಮಾತು | ಅವಶ್ಯಕತೆಯುಳ್ಳವರಿಗೆಲ್ಲ ಈ ಸಂಪತ್ತನ್ನು ದಾನ ಮಾಡು, ನಾನು ಕಾಡಿನಲ್ಲಿದ್ದಾಗ ನನ್ನವರಾರು ತೊಂದರೆಗೆ ಒಳಗಾಗಬಾರದು | | 2.6 |
| 122. | ರಾಮನು ಕಾಡಿಗೆ ಹೊರಟಾಗ ಅವನ ಬಳಿ ಧನವನ್ನು ಯಾಚಿಸಿದವರು ಯಾರು | ಗರ್ಗ ವಂಶದ ಕೊಳಕು ಬಟ್ಟೆಯನ್ನುಟ್ಟ ತ್ರಿಜಟ ಎಂಬ ಬಡ ಬ್ರಾಹ್ಮಣ | 29,30 | 2.6 |
| 123. | ತ್ರಿಜಟನು ರಾಮನಲ್ಲಿ ಯಾಚಿಸಿದಾಗ ರಾಮ ಏನೆಂದ | ಗೋವುಗಳ ಹಿಂಡಿನಲ್ಲಿ ನಿನ್ನ ಈ ದಂಡವನ್ನು ಎಷ್ಟು ದೂರ ಎಸೆಯುವೆಯೋ ಅಲ್ಲಿಯವರೆಗಿನ ಎಲ್ಲಾ ಗೋವುಗಳನ್ನು ನಿನಗೆ ದಾನ ಮಾಡುವೆ | 31 | 2.6 |
| 124. | ತ್ರಿಜಟ ಎಂಬ ಬ್ರಾಹ್ಮಣನು ರಾಮನಿಂದ ಏನೇನನ್ನು ಪಡೆದ | ಸಾವಿರ ಗೋವುಗಳನ್ನು ಮತ್ತು ಯಜ್ಞದ ನಿಮಿತ್ತವಾಗಿ ಸಂಪತ್ತನ್ನು | 33,34 | 2.6 |
| 125. | ರಾಮನನ್ನು ಬಿಟ್ಟು ನಾವಿರಲಾರೆವು ಎಂಬ ಅಯೋಧ್ಯೆಯ ಜನರ ಮಾತಿಗೊಂದು ಉದಾಹರಣೆ. | ನೀರನ್ನು ಬಿಟ್ಟು ಜಲಚರ ಪ್ರಾಣಿಗಳು ಇರಲಾರವು ಹೇಗೋ ಹಾಗೆ | 40 | 2.6 |
| 126. | ರಾಮನು ಕಾಡಿಗೆ ಹೋಗುವ ಸಂದರ್ಭದಲ್ಲಿ ಸುಮಂತ್ರನ ಬಳಿ ದಶರಥನು ತಿಳಿಸಿದ ತನ್ನ ಬಯಕೆ | ತನ್ನ 350 ಪತ್ನಿಯರನ್ನು ಮತ್ತು ಶ್ರೀರಾಮನನ್ನು ಒಮ್ಮೆ ನೋಡಬೇಕೆಂದು | 42 | 2.6 |
| 127. | ಸಂಗ್ರಹರಾಮಾಯಣದ ಮಂಗಲಾಚರಣೆಯಲ್ಲಿ ಯಾರನ್ನು ಸ್ತುತಿಸಲಾಗಿದೆ ? | ನಾರಾಯಣ–ರಾಮ, ಹನುಮ–ಭೀಮ–ಮಧ್ವ, ಗುರು, ವಾಲ್ಮೀಕಿ. | | |
| 128. | ದೇವರ ವ್ಯಾಪ್ತಿ ಎಷ್ಟು ವಿಧ? ಯಾವುದವು ? | 3 ವಿಧ = ದೇಶತಃ, ಕಾಲತಃ, ಗುಣತಃ. | 1 | 1 |
| 129. | ಜಲಧಿ ದುಹಿತುಹು ಅಂದರೆ ಯಾರು ? | ಸಮುದ್ರ ರಾಜನ ಮಗಳು = ಲಕ್ಷ್ಮೀದೇವಿ | 2 | |
| 130. | ಜಗತ್ತಿನ ಸೃಷ್ಟಿಗೂ ಮೊದಲು ಇದ್ದವರಾರು? | ಸ್ವರಮಣನಾದ ನಾರಾಯಣ ಮತ್ತು ರಮಾದೇವೀ. | 8 | |
| 131. | ಪ್ರಲಯಕಾಲದಲ್ಲಿ ಸಮಗ್ರಜಗತ್ತನ್ನು ತನ್ನ ಹೊಟ್ಟೆಯಲ್ಲಿರಿಸಿಕೊಂಡು ನಿದ್ರಾಭಂಗಿಯಲ್ಲಿದ್ದ ಹರಿಯನ್ನು ಸ್ತುತಿಸುತ್ತಿದ್ದವರಾರು ? | ವೇದಗಳು | 9 | |
| 132. | ಕೃತಕೃತ್ಯನಾದ ಭಗವಂತ ಏತಕ್ಕಾಗಿ ಈ ಜಗತ್ತನ್ನು ಸೃಷ್ಟಿಸಿದ ? | ತನ್ನ ಭಕ್ತರ ಏಳಿಗೆಗಾಗಿ | 10 | |
| 133. | ಮೋಕ್ಷವನ್ನು ಕೊಡುವ ಭಗವಂತನ ರೂಪ ? | ಮಾಯಾ–ವಾಸುದೇವ | 11 | |
| 134. | ಪ್ರಳಯಕಾಲದಲ್ಲಿ ಸಮಗ್ರಜಗತ್ತನ್ನು ನಾಶಮಾಡುವ ಭಗವಂತನ ರೂಪ ? | ಜಯಾ–ಸಂಕರ್ಷಣ | 12 | |
| 135. | ಜಗತ್ತನ್ನು ಸೃಷ್ಟಿಮಾಡುವ ಭಗವದ್ರೂಪ ? | ಕೃತಿ–ಪ್ರದ್ಯುಮ್ನ | 13 | |
| 136. | ಸೃಷ್ಟವಾದ ಜಗತ್ತಿಗೆ ಸ್ಥಿತಿಯನ್ನು ನೀಡಿ ಸಂರಕ್ಷಿಸುವ ರೂಪ ? | ಶಾಂತಿ–ಅನಿರುದ್ಧ | 14 | |
| 137. | ಯಾವುದು ಶ್ರೀಹರಿಗೆ ದೇಹವಾಗುತ್ತದೆ ? | ಅಗಣ್ಯ ಗುಣಗಳು | 16 | |
| 138. | ಭಗವಂತನಲ್ಲಿ ಕಿಂಚಿತ್ತೂ ದೋಷವಿಲ್ಲ ಎಂಬುದಕ್ಕೆ ಸಾಕ್ಷಿ | ವೇದ–ವೇದಾಂತ–ಪುರಾಣ–ಇತಿಹಾಸ–ಪಂಚರಾತ್ರ–ಬ್ರಹ್ಮತರ್ಕ. (ಯುಕ್ತಿಗಳು) | 18 | |
| 139. | ಸೃಷ್ಟಿಗಾಗಿ ಭಗವಂತನು ಯಾವುದರಲ್ಲಿ ವೈಷಮ್ಯವನ್ನು ಉಂಟು ಮಾಡಿದ? | ಗುಣತ್ರಯಗಳಲ್ಲಿ (ಸತ್ವಗುಣ, ರಜೋಗುಣ, ತಮೋಗುಣ) | 19 | |
| 140. | ಮೊದಲು ಭಗವಂತನಿಂದ ಸೃಷ್ಟವಾದವುಗಳು ? | ಮಹತ್ತತ್ವ (ಬ್ರಹ್ಮ)–ಅಹಂಕಾರತತ್ವ (ಶಿವ) – ಪಂಚಭೂತ–ಇಂದ್ರಿಯ–ದೇವತೆಗಳು | 19 | |

| ಸಂಖ್ಯೆ | ಪ್ರಶ್ನೆ | ಉತ್ತರ | ಶ್ಲೋಕ | ಸರ್ಗ |
|---|---|---|---|---|
| 141. | ಎಲ್ಲಾ ತತ್ವಗಳೂ – ತದಭಿಮಾನಿದೇವತೆಗಳೂ ಸೇರಿ ಜಗತ್ತನ್ನು ಸೃಷ್ಟಿಮಾಡಲು ಪ್ರಯತ್ನಿಸಿ, ಆಗದಿದ್ದಾಗ ಏನು ಮಾಡಿದರು ? | ಶ್ರೀಹರಿಯನ್ನು ಶರಣು ಹೊಂದಿದರು | 20 | |
| 142. | ಯಾವುದರಿಂದ ಭಗವಂತನು ಈ ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದನು ? | ತನ್ನಿಂದ ಆವಿಷ್ಟವಾದ ತತ್ವಗಳಿಂದ | 21 | |
| 143. | ಸನಕಾದಿಗಳನ್ನು ಸೃಷ್ಟಿ ಮಾಡಿದ ಬ್ರಹ್ಮದೇವರಿಗೆ ಕೋಪ ಬರಲು ಕಾರಣ ? | ಸನಕಾದಿಗಳು ಸೃಷ್ಟಿಪ್ರಕ್ರಿಯೆಯಲ್ಲಿ ತೊಡಗದೇ ಇದ್ದದ್ದು | 23 | |
| 144. | ಕೋಪಗೊಂಡ ಬ್ರಹ್ಮದೇವರು ಧ್ಯಾನಾಸಕ್ತರಾದಾಗ ಏನಾಯಿತು ? | ಬ್ರಹ್ಮದೇವರ ಲಲಾಟದಿಂದ ರುದ್ರದೇವರು ಹುಟ್ಟಿದರು. | 24 | |
| 145. | ಬ್ರಹ್ಮದೇವರ ಪ್ರಾಣಗಳಿಂದ ಹುಟ್ಟಿ ಈ ಜಗದ್ವೃಕ್ಷಕ್ಕೆ ಬೀಜದಂತಿರುವ ಕಶ್ಯಪರ ತಂದೆ ಯಾರು | ಮರೀಚಿ ಮಹರ್ಷಿಗಳು | 25 | |

Krishnaarpanamastu